# ರಾಜಕಾಲುವೆ ಗಡಿ ಗುರುತಿಸಿ ಭೂಸ್ವಾಧೀನ ತೆರವಿಗೆ ಆಯುಕ್ತರ ಸೂಚನೆ

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ಪೂರ್ವ ನಗರ ಪಾಲಿಕೆ ವ್ಯಾಪ್ತಿಯ ಬೆಳ್ಳಂದೂರು ವೇಸ್ಟ್ ವೀರ್/ಔಟ್‌ಲೆಟ್‌ನಿಂದ ಓಲ್ಡ್ ಏರ್‌ಪೋರ್ಟ್ ರಸ್ತೆಯ ವರ್ಜೀನಿಯಾ ಮಾಲ್‌ವರೆಗೆ ರಾಜಕಾಲುವೆ ಸಂರಕ್ಷಣೆ, ಬಫರ್ ವಲಯ ಅಭಿವೃದ್ಧಿ ಹಾಗೂ ಸರ್ವಿಸ್ ರಸ್ತೆ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದ ಭೂಸ್ವಾಧೀನ ಪ್ರಕ್ರಿಯೆಯನ್ನು ತ್ವರಿತಗೊಳಿಸುವಂತೆ ಆಯುಕ್ತ ಡಿ.ಎಸ್. ರಮೇಶ್ ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂಬಂಧ ಇಂದು ಅವರ ಅಧ್ಯಕ್ಷತೆಯಲ್ಲಿ ನಡೆದ ವಿವಿಧ ಇಲಾಖೆಗಳ ಸಮನ್ವಯ ಸಭೆಯಲ್ಲಿ ಕಾಮಗಾರಿಯ ಪ್ರಗತಿ ಹಾಗೂ ಭೂಸ್ವಾಧೀನ ಪ್ರಕ್ರಿಯೆ ಕುರಿತು ಸಮಗ್ರವಾಗಿ ಚರ್ಚಿಸಲಾಯಿತು.



ರಾಜಕಾಲುವೆಯ ಮೂಲ ಗಡಿ ಹಾಗೂ ಬಫರ್ ವಲಯವನ್ನು ಅಧಿಕೃತ ದಾಖಲೆಗಳ ಆಧಾರದ ಮೇಲೆ ನಿಖರವಾಗಿ ಗುರುತಿಸಿ, ಸ್ಥಳ ಪರಿಶೀಲನೆ ಮೂಲಕ ದೃಢೀಕರಿಸಬೇಕು.

ಭೂ ದಾಖಲೆಗಳು, ಸರ್ವೇ ನಕ್ಷೆಗಳು ಹಾಗೂ ಸಂಬಂಧಪಟ್ಟ ಇಲಾಖೆಗಳ ದಾಖಲೆಗಳನ್ನು ಸಮನ್ವಯಗೊಳಿಸಿ ಗಡಿ ಗುರುತಿಸುವ ಕಾರ್ಯವನ್ನು ಕೈಗೊಳ್ಳಬೇಕು ಎಂದು ರಮೇಶ್ ಸೂಚಿಸಿದರು.

ರಾಜಕಾಲುವೆ ಗಡಿ ಗುರುತಿಸುವಿಕೆಯಲ್ಲಿ ಯಾವುದೇ ಗೊಂದಲಕ್ಕೆ ಅವಕಾಶ ನೀಡದೆ, ಅದರ ಆಧಾರದ ಮೇಲೆ ಯೋಜನೆಗಳನ್ನು ಅಂತಿಮಗೊಳಿಸಿ ಕಾಮಗಾರಿಯನ್ನು ವಿಳಂಬವಿಲ್ಲದೆ ಅನುಷ್ಠಾನಗೊಳಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಇದೇ ವೇಳೆ ವರ್ತೂರು ಕೋಡಿಯಿಂದ ಜಿಬಿಎ ವ್ಯಾಪ್ತಿಯ ವರ್ತೂರು-ಗುಂಜೂರು ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸಂಬಂಧಿಸಿದಂತೆ ಕೆಆರ್‌ಡಿಸಿಎಲ್ ಕೈಗೊಳ್ಳುತ್ತಿರುವ ಭೂಸ್ವಾಧೀನ ಪ್ರಕ್ರಿಯೆಯನ್ನೂ ಸಭೆಯಲ್ಲಿ ಪರಿಶೀಲಿಸಲಾಯಿತು.

ನಕ್ಷೆ ಮಂಜೂರಾತಿ ಸಂದರ್ಭದಲ್ಲಿ ಭೂಮಾಲೀಕರು ಪರಿತ್ಯಜನಾ ಪತ್ರದ ಮೂಲಕ ರಸ್ತೆ ಅಭಿವೃದ್ಧಿಗೆ ಕಾಯ್ದಿರಿಸಿರುವ ಜಾಗವನ್ನು ಬಳಸಿಕೊಂಡು ಕಾಮಗಾರಿ ಪೂರ್ಣಗೊಳಿಸುವಂತೆ ಸೂಚಿಸಲಾಯಿತು.

# ಜನರ ಅಹವಾಲುಗಳಿಗೆ ತ್ವರಿತ ಸ್ಪಂದನೆ: ಬಾಕಿ ಪ್ರಕರಣಗಳ ಶೀಘ್ರ ವಿಲೇವಾರಿ

• ಉದಯವಾಹಿನಿ, ಬೆಂಗಳೂರು

ಸಾರ್ವಜನಿಕರ ದೂರುಗಳಿಗೆ ತ್ವರಿತ ಪರಿಹಾರ ಕಲ್ಪಿಸುವ ಉದ್ದೇಶದಿಂದ ಬೆಂಗಳೂರು ಉತ್ತರ ನಗರ ಪಾಲಿಕೆ ಸಹಾಯ 2.0 ತಂತ್ರಾಂಶ ಹಾಗೂ ಪ್ರತಿ ನಡೆಯುವ ಆಯುಕ್ತರ ಫೋನ್-ಇನ್ ಕಾರ್ಯಕ್ರಮದ ಮೂಲಕ ಸ್ವೀಕರಿಸುವ ಅಹವಾಲುಗಳನ್ನು ಆದ್ಯತೆಯ ಮೇರೆಗೆ ಇತ್ಯರ್ಥಪಡಿಸುತ್ತಿದೆ. 2023ರಲ್ಲಿ ಆರಂಭವಾದ ಸಹಾಯ 2.0 ತಂತ್ರಾಂಶದಲ್ಲಿ ನಾಗರಿಕರು ನೇರವಾಗಿ ತಮ್ಮ ಅಹವಾಲುಗಳನ್ನು ದಾಖಲಿಸುವ ವ್ಯವಸ್ಥೆ ಕಲ್ಪಿಸಲಾಗಿದೆ. ರಚನೆಯಾಗುವವರೆಗೆ ಒಟ್ಟು 1,17,175 ಅಹವಾಲುಗಳು ದಾಖಲಾಗಿದ್ದು, ಅವುಗಳಲ್ಲಿ 1,14,982 ಪ್ರಕರಣಗಳನ್ನು ಇತ್ಯರ್ಥಪಡಿಸಿ ಕೇವಲ 2,193 ಪ್ರಕರಣಗಳು ಮಾತ್ರ ಬಾಕಿ ಉಳಿದಿದ್ದವು. ಬೆಂಗಳೂರು ಉತ್ತರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಹಾಯ ತಂತ್ರಾಂಶ ಹಾಗೂ ಇದುವರೆಗೆ ನಡೆದ 45 ಫೋನ್-ಇನ್ ಕಾರ್ಯಕ್ರಮಗಳ ಮೂಲಕ ಬಂದ 2,727 ದೂರುಗಳನ್ನು ಸೇರಿಸಿ ಒಟ್ಟು 71,013 ಅಹವಾಲುಗಳು ದಾಖಲಾಗಿವೆ.

ಮೇ 2026ರ ಅಂತ್ಯದ ವೇಳೆಗೆ ಸುಮಾರು 9,100 ಪ್ರಕರಣಗಳು ಬಾಕಿ ಇದ್ದ ಹಿನ್ನೆಲೆಯಲ್ಲಿ ಆಯುಕ್ತರು ಹಾಗೂ ಜಂಟಿ ಆಯುಕ್ತರ ನೇತೃತ್ವದಲ್ಲಿ ಜೂನ್‌ನಿಂದ ಪ್ರತಿದಿನ ಇಲಾಖಾವಾರು ಪ್ರಗತಿ ಪರಿಶೀಲನಾ ಸಭೆಗಳನ್ನು ನಡೆಸಲಾಗಿದೆ. ಇದರ ಪರಿಣಾಮವಾಗಿ ಬಾಕಿ ಪ್ರಕರಣಗಳ ಸಂಖ್ಯೆ ಗಣನೀಯವಾಗಿ ಇಳಿದು, ಫೋನ್-ಇನ್ ಕಾರ್ಯಕ್ರಮದ 218 ಪ್ರಕರಣಗಳನ್ನು ಒಳಗೊಂಡಂತೆ ಪ್ರಸ್ತುತ ಕೇವಲ 819 ಪ್ರಕರಣಗಳು ಮಾತ್ರ, ಬಾಕಿ ಉಳಿದಿವೆ.

# NEET ಪ್ರತಿಭಟನಾಕಾರನ ಮೇಲೆ ಮುಖವಾಡ ಧರಿಸಿದವರಿಂದ ಮಾರಣಾಂತಿಕ ಹಲ್ಲೆ

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

NEET ಪ್ರಶ್ನೆ ಪತ್ರಿಕೆ ಸೋರಿಕೆ ವಿರುದ್ಧದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದಕ್ಕಾಗಿ 'ಆಲ್ ಇಂಡಿಯಾ ಸ್ಟೂಡೆಂಟ್ಸ್ ಅಸೋಸಿಯೇಷನ್' ಸದಸ್ಯ 19 ವರ್ಷದ ವಿದ್ಯಾರ್ಥಿಯೊಬ್ಬನ ಮೇಲೆ ಮುಖವಾಡ ಧರಿಸಿದ ನಾಲ್ವರು ವ್ಯಕ್ತಿಗಳು ಹಲ್ಲೆ ನಡೆಸಿರುವ ಆರೋಪ ಕೇಳಿಬಂದಿದೆ. ಜಾಲಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ವೃತ್ತದ ಬಳಿ ಮಂಗಳವಾರ ರಾತ್ರಿ ಈ ಘಟನೆ ನಡೆದಿದೆ ಎನ್ನಲಾಗಿದೆ. ಹಲ್ಲೆಕೋರರು ಆತನನ್ನು ನೀನು ಮೋದಿ ಅವರ ರಾಜೀನಾಮೆಯನ್ನು ಬಯಸುತ್ತೀಯಾ? ಎಂದು ಕೂಡ ಪ್ರಶ್ನಿಸಿದ್ದಾರೆ ಎಂದು ಆರೋಪಿಸಲಾಗಿದೆ.

ಈ ಸಂಬಂಧ ಅಮನ್ ದೀಪ್‌ಸಿಂಗ್ ಎಂಬುವರು ದೂರು ದಾಖಲಿಸಿದ್ದಾರೆ. ಮಂಗಳವಾರ ರಾತ್ರಿ 10.30ರ ಸುಮಾರಿಗೆ ಊಟದ ನಂತರ ನಡೆದುಕೊಂಡು ಮನೆಗೆ ಮರಳುತ್ತಿದ್ದಾಗ, ಎರಡು ಬೈಕ್‌ಗಳಲ್ಲಿ ಬಂದ ಮುಖವಾಡ ಧರಿಸಿದ ನಾಲ್ವರು ವ್ಯಕ್ತಿಗಳು ಅವರನ್ನು ತಡೆದರು. ಹಲ್ಲೆ ನಡೆಸುವ ಮುನ್ನ ಅವರು ಆತನ ಗುರುತನ್ನು ಖಚಿತಪಡಿಸಿಕೊಂಡಿದ್ದಾರೆ. ಕೈಯಲ್ಲಿ ದೊಣ್ಣೆ ಹಿಡಿದಿದ್ದ ವ್ಯಕ್ತಿಯೊಬ್ಬ, ಹಲ್ಲೆ ನಡೆಸುವ ಮೊದಲು ನಿನಗೆ ಮೋದಿ ಅವರ ರಾಜೀನಾಮೆ ಬೇಕೇ? ಎಂದು ಕೇಳಿದನೆಂದು ವರದಿಯಾಗಿದೆ. ನಂತರ ಆರೋಪಿಗಳು ಸ್ಥಳದಿಂದ ಪರಾರಿಯಾಗಿರುವುದಾಗಿ ದೂರಿನಲ್ಲಿ ಉಲ್ಲೇಖಿಸಲಾಗಿದೆ. ಪ್ರಕರಣ ದಾಖಲಿಸಲಾಗಿದೆ ಮತ್ತು ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಿ ಆರೋಪಿಗಳಿಗಾಗಿ ಹುಡುಕಾಟ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

# ಬಲವಾದ ಗಾಳಿ, ಮಳೆ ಇಲ್ಲ: ಕೈಕೊಟ್ಟ ಮುಂಗಾರು; ಆಗಸ್ಟ್ ತಿಂಗಳಲ್ಲಿ ಮಳೆ ಬರುತ್ತಾ?



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಕಳೆದ ಕೆಲವು ದಿನಗಳಿಂದ ಕರ್ನಾಟಕದಾದ್ಯಂತ ಬೀಸುತ್ತಿರುವ ಬಲವಾದ ಗಾಳಿ ತಂಪಾದ, ಆಹ್ಲಾದಕರ ವಾತಾವರಣವನ್ನು ತಂದಿದ್ದರೂ, ಮುಂಗಾರು ಮಳೆಯನ್ನು ಹೆಚ್ಚಿಸಲು ನೆರವಾಗಿಲ್ಲ.

ಭಾರತೀಯ ಹವಾಮಾನ ಇಲಾಖೆ ಮಾಹಿತಿ ಪ್ರಕಾರ, ರಾಜ್ಯದ ಬಹುತೇಕ ಭಾಗಗಳಲ್ಲಿ ಗಂಟೆಗೆ ಸರಾಸರಿ 50-60 ಕಿ.ಮೀ. ವೇಗದಲ್ಲಿ ಗಾಳಿ ಬೀಸುತ್ತಿದೆ. ಆದರೆ ಈ ಗಾಳಿಯಲ್ಲಿ ತೇವಾಂಶದ ಪ್ರಮಾಣ ಅತ್ಯಂತ ಕಡಿಮೆಯಾಗಿದೆ. ಉತ್ತರ ಒಳನಾಡು ಕರ್ನಾಟಕದಲ್ಲಿ ಗಾಳಿಯ ವೇಗ 50-60 ಕಿ.ಮೀ., ದಕ್ಷಿಣ ಒಳನಾಡು ಕರ್ನಾಟಕದಲ್ಲಿ 40-50 ಕಿ.ಮೀ. ಹಾಗೂ ಕರಾವಳಿ ಕರ್ನಾಟಕದಲ್ಲಿ ಸುಮಾರು 40 ಕಿ.ಮೀ. ವೇಗದಲ್ಲಿದೆ. ರಾಜ್ಯದ ಬಹುತೇಕ ಭಾಗಗಳಲ್ಲಿ ಮುಂದಿನ ಏಳು ದಿನಗಳ ಕಾಲ ಮಳೆಯ ಮುನ್ಸೂಚನೆ ಇಲ್ಲ. ಜೂನ್ ಮತ್ತು ಜುಲೈ ತಿಂಗಳಲ್ಲಿ ನೈಋತ್ಯ ಮುಂಗಾರು ರಾಜ್ಯದಲ್ಲಿ ಶೇ.28ರಷ್ಟು ಮಳೆ ಕೊರತೆಯನ್ನು ದಾಖಲಿಸಿದೆ. ಉತ್ತರ ಒಳನಾಡು ಕರ್ನಾಟಕದಲ್ಲಿ ಶೇ.10, ಕರಾವಳಿ ಕರ್ನಾಟಕದಲ್ಲಿ ಶೇ.28 ಹಾಗೂ ದಕ್ಷಿಣ ಒಳನಾಡು ಕರ್ನಾಟಕದಲ್ಲಿ ಶೇ.36ರಷ್ಟು ಮಳೆ ಕೊರತೆಯಾಗಿದೆ. ಕರ್ನಾಟಕ ಹವಾಮಾನ ಇಲಾಖೆಯ ನಿರ್ದೇಶಕ ಎನ್. ಪುವಿಯರಸನ್, ಮಳೆ ಸುರಿಯಲು ಅಗತ್ಯವಾದ ಟ್ರಫ್ (ಕಡಿಮೆ ಒತ್ತಡದ ಉದ್ದ ವಲಯ), ಗಾಳಿಯ ಸಂಗಮ ಅಥವಾ ಇತರ ಅನುಕೂಲಕರ ಸಿನಾಪ್ಟಿಕ್ (ವಿಶಾಲ ಪ್ರಮಾಣದ ವಾತಾವರಣೀಯ) ಪರಿಸ್ಥಿತಿಗಳು ಇಲ್ಲ. ಸಾಮಾನ್ಯವಾಗಿ ಬಯಲು ಪ್ರದೇಶಗಳಲ್ಲಿ ಮಳೆಯಾಗಲು ಗಾಳಿಯಲ್ಲಿ 55-60 ಮಿ.ಮೀ. ಹಾಗೂ ಗುಡ್ಡಗಾಡು ಪ್ರದೇಶಗಳಲ್ಲಿ ಸುಮಾರು 50 ಮಿ.ಮೀ. ನೀರಿನ ಸಮನಾದ ತೇವಾಂಶ ಇರಬೇಕು. ಆದರೆ ಕರ್ನಾಟಕದಲ್ಲಿ ಈಗ ಅದು 40 ಮಿ.ಮೀ.ಗಿಂತಲೂ ಕಡಿಮೆಯಿದೆ ಎಂದು ವಿವರಿಸಿದರು.

# ಉಪಸಭಾಪತಿ ಹಾಗೂ ವಿಧಾನ ಪರಿಷತ್ ಸದಸ್ಯ ಸ್ಥಾನಕ್ಕೆ ಎಂ.ಕೆ. ಪ್ರಾಣೇಶ್ ರಾಜೀನಾಮೆ

• ಉದಯವಾಹಿನಿ, ಬೆಂಗಳೂರು

ಬಿಜೆಪಿ ಮುಖಂಡ ಎಂ.ಕೆ. ಪ್ರಾಣೇಶ್ ಅವರು ವಿಧಾನ ಪರಿಷತ್ತಿನ ಉಪಸಭಾಪತಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ತಮ್ಮ ರಾಜೀನಾಮೆ ಪತ್ರವನ್ನು ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ಸಲ್ಲಿಸಿದ್ದು, ರಾಜೀನಾಮೆಯನ್ನು ಅಂಗೀಕರಿಸುವಂತೆ ಕೋರಿದ್ದಾರೆ. ಕರ್ನಾಟಕ ವಿಧಾನ ಪರಿಷತ್ತಿನ ಉಪಸಭಾಪತಿ ಹುದ್ದೆ ಮತ್ತು ಶಾಸಕ ಸ್ಥಾನಕ್ಕೆ ನಾನು ಸ್ವಇಚ್ಛೆಯಿಂದ ರಾಜೀನಾಮೆ ನೀಡುತ್ತಿದ್ದೇನೆ.

ಸದರಿ ರಾಜೀನಾಮೆ ಪತ್ರವನ್ನು ಅಂಗೀಕರಿಸುವಂತೆ ಕೋರುತ್ತೇನೆ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಚಿಕ್ಕಮಗಳೂರು ಕ್ಷೇತ್ರದಿಂದ ವಿಧಾನಪರಿಷತ್ ಸದಸ್ಯ ಸ್ಥಾನಕ್ಕೆ 2021ರಲ್ಲಿ ನಡೆದ ಚುನಾವಣೆಯಲ್ಲಿನ ಬಿಜೆಪಿ ಅಭ್ಯರ್ಥಿ ಎಂ.ಕೆ.ಪ್ರಾಣೇಶ್ ಆಯ್ಕೆಯನ್ನು ಹೈಕೋರ್ಟ್ ಅಸಿಂಧುಗೊಳಿಸಿತ್ತು. ಈ ಹಿನ್ನೆಲೆಯಲ್ಲಿ ಪ್ರಾಣೇಶ್ ರಾಜೀನಾಮೆ ನೀಡಿದ್ದಾರೆ.ಗಾಯತ್ರಿ ಶಾಂತೇಗೌಡ ಸಲ್ಲಿಸಿದ್ದ ಚುನಾವಣಾ ತಕರಾರು ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಆದೇಶ ಪ್ರಕಟಿಸಿತ್ತು.

# ಸ್ವಯಂಘೋಷಿತ ದೇವ ಮಾನವ, ಮತ್ತಿಬ್ಬರಿಂದ ಆಂಧ್ರದ ಮಹಿಳೆಗೆ 2.5 ಕೋಟಿ ರೂ. ವಂಚನೆ!

• ಉದಯವಾಹಿನಿ, ಬೆಂಗಳೂರು

ಸ್ವಯಂಘೋಷಿತ ದೇವಮಾನವ ಸೇರಿದಂತೆ ಮೂವರು ವ್ಯಕ್ತಿಗಳು ಆಂಧ್ರ ಪ್ರದೇಶದ ಮಹಿಳೆಯೊಬ್ಬರು ಸುಮಾರು 2.5 ಕೋಟಿ ರೂ. ವಂಚಿಸಿರುವ ಘಟನೆ ರಾಜಧಾನಿ ಬೆಂಗಳೂರಿನಲ್ಲಿ ನಡೆದಿದೆ. ಈ ಸಂಬಂಧ ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಪಲಮನೇರ್ ನಿವಾಸಿ ಹಾಗೂ ಸಂತ್ರಸ್ತೆ ಎಂ. ಕುಮುದಾ ನೀಡಿದ ದೂರಿನ ಆಧಾರದ ಮೇಲೆ, ಸಿಸಿಬಿ ಪೊಲೀಸರು ಬುಧವಾರ ಸ್ವಯಂಘೋಷಿತ ದೇವಮಾನವ ಅಫ್ಸರ್ ಪಾಷಾ, ಶಂಕರ್ ಮತ್ತು ಭರತ್ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ. ತಮ್ಮ ಪತಿ, ಅತ್ತೆ ಮತ್ತು ಭಾವನಿಗೆ ಸೇರಿದ ಚಾಮರಾಜಪೇಟೆಯ ಆಸ್ತಿಯನ್ನು ಅಡಮಾನವಿಟ್ಟು ಬ್ಯಾಂಕ್ ಸಾಲ ಪಡೆಯಲು ಬಯಸಿದ್ದಾಗ, 2022ರಲ್ಲಿ ಸ್ನೇಹಿತರೊಬ್ಬರ ಮೂಲಕ ಭರತ್ ಮತ್ತು ಶಂಕರ್ ಅವರ ಪರಿಚಯವಾಯಿತು ಎಂದು ಕುಮುದಾ ತಮ್ಮ ದೂರಿನಲ್ಲಿ ತಿಳಿಸಿದ್ದಾರೆ.

# ಸರ್ಕಾರದ ಆಸ್ತಿ ಅಲ್ಲ, ಜನರ ಆಸ್ತಿ, ಅದನ್ನು ಸ್ವಚ್ಛವಾಗಿ ಕಾಪಾಡಿಕೊಳ್ಳಿ

## ಬೆಳಗ್ಗೆ ಹೆಬ್ಬಾಳ ಜಂಕ್ಷನ್ ಸಮೀಪ ಗಾರೆ ತೊಟ್ಟಿಯಲ್ಲಿ ಮಣ್ಣು ಹೊತ್ತು ಅಭಿಯಾನಕ್ಕೆ ಸಿಎಂ ಡಿ ಕೆ ಶಿವಕುಮಾರ್ ಚಾಲನೆ ನೀಡಿದರು

• ಉದಯವಾಹಿನಿ, ಬೆಂಗಳೂರು

1 ತ್ಯಾಜ್ಯ ವಿಲೇವಾರಿಗೆ ಕಠಿಣ ಕ್ರಮ
2 ಖಾಲಿ ನಿವೇಶನಗಳ ಸ್ವಚ್ಛತೆ ಕಡ್ಡಾಯ
3 ಟೀಕೆಗಳು ಬರುತ್ತವೆ, ಕೆಲಸವೇ ಉತ್ತರ

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇಂದು ಶನಿವಾರ ಬೆಂಗಳೂರಿನಲ್ಲಿ 'ತ್ಯಾಜ್ಯದಿಂದ ಸ್ವಾತಂತ್ರ್ಯ' ಅಭಿಯಾನಕ್ಕೆ ಚಾಲನೆ ನೀಡಿ, ನಗರ ಸ್ವಚ್ಛತೆಯನ್ನು ಸುಧಾರಿಸಲು ಹಲವು ಮಹತ್ವದ ಕ್ರಮಗಳನ್ನು ಘೋಷಿಸಿದರು. ಅಕ್ರಮವಾಗಿ ತ್ಯಾಜ್ಯ ಸುರಿಯುವ ವಾಹನಗಳನ್ನು ವಶಪಡಿಸಿಕೊಳ್ಳುವುದು, ಖಾಲಿ ನಿವೇಶನಗಳಿಗೆ ಕಠಿಣ ನಿಯಮ ಜಾರಿಗೊಳಿಸುವುದು ಹಾಗೂ ನಗರದ ಹಸಿರು ಹೊದಿಕೆಯನ್ನು ಹೆಚ್ಚಿಸಲು ಶೀಘ್ರದಲ್ಲೇ ಐತಿಹಾಸಿಕ ಯೋಜನೆ ಘೋಷಿಸುವುದಾಗಿ ಅವರು ತಿಳಿಸಿದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ ಐದು ನಗರ ನಿಗಮಗಳು, ಬೆಂಗಳೂರು ಘನ ತ್ಯಾಜ್ಯ ನಿರ್ವಹಣಾ ಸಂಸ್ಥೆ ಹಾಗೂ ಇತರೆ ಸರ್ಕಾರಿ ಸಂಸ್ಥೆಗಳ ಸಹಯೋಗದಲ್ಲಿ ಒಂದು ತಿಂಗಳ ಕಾಲ ನಡೆಯಲಿರುವ ಈ ಅಭಿಯಾನದ ಉದ್ದೇಶ, ನಗರವನ್ನು ನಿರ್ಮಾಣ ಮತ್ತು ಕಟ್ಟಡ ಅವಶೇಷಗಳು, ಜಡ ತ್ಯಾಜ್ಯ ಹಾಗೂ ಇತರೆ ಕಸದ ರಾಶಿಗಳಿಂದ ಮುಕ್ತಗೊಳಿಸುವುದಾಗಿದೆ. ಬೆಂಗಳೂರು ಸರ್ಕಾರದ ಆಸ್ತಿ ಅಲ್ಲ. ಬೆಂಗಳೂರು ನಿಮ್ಮ ಆಸ್ತಿ. ನಿಮ್ಮ ಆಸ್ತಿಯನ್ನು ಕಾಪಾಡುವ ಉದ್ದೇಶದಿಂದಲೇ ಈ ಮಹತ್ವದ ಅಭಿಯಾನವನ್ನು ಆರಂಭಿಸಿದ್ದೇವೆ, ಎಂದು ಹೇಳಿದರು.


ನಿರ್ಮಾಣ ಅವಶೇಷಗಳು ಹಾಗೂ ತ್ಯಾಜ್ಯವನ್ನು ಅಕ್ರಮವಾಗಿ ಸುರಿಯುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಪೊಲೀಸರಿಗೆ ಸೂಚನೆ ನೀಡಿರುವುದಾಗಿ ಸಿಎಂ ಹೇಳಿದರು.

ಅನುಮತಿ ಇಲ್ಲದೆ ನಿರ್ಮಾಣ ತ್ಯಾಜ್ಯವನ್ನು ಸುರಿದರೆ ಅಥವಾ ನಿಗದಿತ ಸ್ಥಳ ಹೊರತುಪಡಿಸಿ ಬೇರೆಡೆ ವಿಲೇವಾರಿ ಮಾಡಿದರೆ ಅಂತಹ ವಾಹನಗಳನ್ನು ವಶಪಡಿಸಿಕೊಳ್ಳಬೇಕು ಎಂದು ಅವರು ಸೂಚಿಸಿದರು. ಈ ಹಿಂದೆ ಸಿಸಿಟಿವಿ ಕಣ್ಗಾವಲು ಮತ್ತು ನೋಟೀಸ್‌ಗಳಿಂದ ಸುಮಾರು 15 ದಿನಗಳ ಕಾಲ ಅಕ್ರಮ ತ್ಯಾಜ್ಯ ವಿಲೇವಾರಿ ನಿಯಂತ್ರಣಕ್ಕೆ ಬಂದಿತ್ತಾದರೂ, ಬಳಿಕ ಮತ್ತೆ ಉಲ್ಲಂಘನೆಗಳು ಆರಂಭವಾಗಿವೆ ಎಂದು ಅವರು ಹೇಳಿದರು.

ಖಾಲಿ ನಿವೇಶನಗಳ ನಿರ್ವಹಣೆ ಕುರಿತು ಮಾತನಾಡಿದ ಡಿ ಕೆ ಶಿವಕುಮಾರ್, ಬಡಾವಣೆ ಅಭಿವೃದ್ಧಿ ಪ್ರಾಧಿಕಾರ ಹಾಗೂ ನಗರ ನಿಗಮಗಳ ನಿವೇಶನ ಮಾಲೀಕರು ಐದು ವರ್ಷಗಳೊಳಗೆ ಮನೆ ನಿರ್ಮಿಸಬೇಕು ಹಾಗೂ ಅಷ್ಟರೊಳಗೆ ನಿವೇಶನವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು ಎಂದು ಈಗಾಗಲೇ ಸೂಚಿಸಲಾಗಿದೆ ಎಂದರು.

ಐದು ವರ್ಷಗಳೊಳಗೆ ಮನೆ ನಿರ್ಮಿಸದಿದ್ದರೆ ದುಪ್ಪಟ್ಟು ತೆರಿಗೆ ವಿಧಿಸುವುದು ಅಥವಾ ನಿವೇಶನವನ್ನು ಸರ್ಕಾರಕ್ಕೆ ವಾಪಸ್ ಪಡೆಯುವಂತಹ ವ್ಯವಸ್ಥೆ ಜಾರಿಗೊಳಿಸಬೇಕು ಎಂದು ಅವರು ಹೇಳಿದರು. ಖಾಲಿ ನಿವೇಶನಗಳನ್ನು ಕೇವಲ ಹೂಡಿಕೆಯಾಗಿ ಉಳಿಸಿಕೊಳ್ಳಬಾರದು ಎಂದು ಮನವಿ ಮಾಡಿದ ಅವರು, ಸಣ್ಣ ಮನೆ ಆದರೂ ಕಟ್ಟಿಕೊಳ್ಳಿ. ನಂತರ ಬೇಕಾದರೆ ಅದನ್ನು ಕೆಡವಿ ದೊಡ್ಡ ಮನೆ ಕಟ್ಟಬಹುದು. ಆದರೆ ಕೇವಲ ಹೂಡಿಕೆಯಾಗಿ ಖಾಲಿ ಬಿಟ್ಟರೆ ಅಲ್ಲಿ ಉಂಟಾಗುವ ಸ್ವಚ್ಛತೆ ಮತ್ತು ಇತರ ಸಮಸ್ಯೆಗಳಿಗೆ ಸರ್ಕಾರವನ್ನು ಹೊಣೆ ಮಾಡಲಾಗುವುದಿಲ್ಲ ಎಂದರು. ನಗರದ ಸ್ವಚ್ಛತೆ ಕುರಿತು ವ್ಯಕ್ತವಾಗುತ್ತಿರುವ ಟೀಕೆಗಳ ಬಗ್ಗೆ ಪ್ರತಿಕ್ರಿಯಿಸಿದ ಅವರು, ಟೀಕೆಗಳು




ಉದಯವಾಹಿನಿ ಚಿತ್ರ

ಸದಾ ಇರುತ್ತವೆ. ಆದರೆ ನಮ್ಮ ಕೆಲಸ ಶಾಶ್ವತವಾಗಿರುತ್ತದೆ. ಕೆಲಸ ಪೂರ್ಣಗೊಂಡ ಬಳಿಕ ಟೀಕೆಗಳು ತಾನಾಗಿಯೇ ನಿಲ್ಲುತ್ತವೆ ಎಂದರು.

> ಶಿವಾಜಿನಗರದಲ್ಲಿ ನಡೆದ ಅಧಿಕಾರಿಗಳ ಮೇಲಿನ ಹಲ್ಲೆಯನ್ನು ಉಲ್ಲೇಖಿಸಿದ ಮುಖ್ಯಮಂತ್ರಿ, ಅಧಿಕಾರಿಗಳ ಮೇಲೆ ಹಲ್ಲೆ ನಡೆಸುವುದು ಸರ್ಕಾರ, ಶಾಸಕರು ಹಾಗೂ ಸಚಿವರ ಮೇಲಿನ ಹಲ್ಲೆಯಷ್ಟೇ ಗಂಭೀರ. ಇಂತಹ ಗೂಂಡಾಗಿರಿಯನ್ನು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ ಎಂದು ಎಚ್ಚರಿಕೆ ನೀಡಿದರು-.ಡಿ ಕೆ ಶಿವಕುಮಾರ್

### ನಮ್ಮ ರೈತರ ಹಿತವನ್ನು ಕಾಪಾಡಲು ನಮ್ಮ ಸರ್ಕಾರ ಬದ್ಧ

ತಮಿಳುನಾಡಿಗೆ 177 ಟಿಎಂಸಿ ನೀರನ್ನು ಹರಿಸಬೇಕು ಎಂದು ಆದೇಶವಿದೆ. ಇದಕ್ಕೆ ಸುಪ್ರೀಂಕೋರ್ಟ್ ಕೂಡ ಬಲ ನೀಡಿದೆ. ನಾವು ನ್ಯಾಯಾಲಯದ ಆದೇಶಕ್ಕೆ ಗೌರವ ನೀಡಬೇಕು. ಜೊತೆಗೆ ನಮ್ಮ ರೈತರನ್ನೂ ಕಾಪಾಡಬೇಕು. ನಮ್ಮ ರೈತರ ಹಿತವನ್ನು ಕಾಪಾಡಲು ನಮ್ಮ ಸರ್ಕಾರ ಬದ್ಧವಾಗಿದೆ. ಈ ಆದೇಶ ಎರಡೂ ರಾಜ್ಯಕ್ಕೆ ವರ ಎಂದು ಅಭಿಪ್ರಾಯಪಟ್ಟರು.



### ಮಾಲೀಕರಿಂದ ವಸೂಲಿ

ಖಾಸಗಿ ಖಾಲಿ ನಿವೇಶನಗಳ ಮಾಲೀಕರು ಆಗಸ್ಟ್ 15ರೊಳಗೆ ತಮ್ಮ ಜಾಗದಲ್ಲಿರುವ ಕಸ, ಕಟ್ಟಡ ಅವಶೇಷಗಳು ಹಾಗೂ ಬೆಳೆದಿರುವ ಪೊದೆಗಳನ್ನು ತೆರವುಗೊಳಿಸಬೇಕು ಎಂದು ಸೂಚಿಸಲಾಗಿದೆ. ಗಡುವಿನೊಳಗೆ ಸ್ವಚ್ಛಗೊಳಿಸದಿದ್ದರೆ ಸಂಬಂಧಿತ ನಿಗಮವೇ ಸ್ವಚ್ಛತೆ ನಡೆಸಿ, ಅದರ ವೆಚ್ಚವನ್ನು ಮಾಲೀಕರಿಂದ ವಸೂಲಿ ಮಾಡುವುದರ ಜೊತೆಗೆ ನಿಯಮಾನುಸಾರ ದಂಡವೂ ವಿಧಿಸಲಾಗುತ್ತದೆ.

> ನಗರದ ಹಸಿರು ಹೊದಿಕೆಯನ್ನು ಹೆಚ್ಚಿಸುವ ಕುರಿತು ಸರ್ಕಾರ ಮಹತ್ವದ ಯೋಜನೆ ರೂಪಿಸುತ್ತಿದೆ ಎಂದು ತಿಳಿಸಿದ ಮುಖ್ಯಮಂತ್ರಿ, ಹಸಿರೀಕರಣದ ಬಗ್ಗೆ ನನ್ನ ಮನಸ್ಸಿನಲ್ಲಿ ದೊಡ್ಡ ಯೋಜನೆಯಿದೆ. ಈ ಕಾರ್ಯಕ್ರಮದಲ್ಲಿ ಅದನ್ನು ಘೋಷಿಸುವುದಿಲ್ಲ.
> ಆದರೆ ನಮ್ಮ ಸರ್ಕಾರದ 100 ದಿನಗಳ ಕಾರ್ಯಕ್ರಮದಲ್ಲಿ ಬೆಂಗಳೂರಿನ ಹಸಿರೀಕರಣಕ್ಕೆ ಸಂಬಂಧಿಸಿದ ಐತಿಹಾಸಿಕ ಘೋಷಣೆ ಮಾಡುತ್ತೇನೆ ಎಂದರು.-ಡಿ ಕೆ ಶಿವಕುಮಾರ್

### ನಿವೇಶನ ಪಡೆದವರು 5 ವರ್ಷಗಳೊಳಗೆ ಮನೆ ಕಟ್ಟದಿದ್ದರೆ ಸೈಟ್ ವಾಪಸ್

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಗ್ರೇಟರ್ ಬೆಂಗಳೂರು ಅಥಾರಿಟಿ ಹಿಂದಿನ ಸಿಐಟಿಬಿ ಅಥವಾ ಹೌಸಿಂಗ್ ಸೊಸೈಟಿಗಳಿಂದ ನಿವೇಶನ ಪಡೆದವರು 5 ವರ್ಷಗಳೊಳಗೆ ಮನೆ ನಿರ್ಮಿಸಬೇಕು. ಇಲ್ಲವಾದರೆ ದುಪ್ಪಟ್ಟು ತೆರಿಗೆ ವಿಧಿಸುವುದು ಅಥವಾ ನಿವೇಶನವನ್ನು ಹಿಂಪಡೆಯುವಂತಹ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಎಚ್ಚರಿಕೆ ನೀಡಿದ್ದಾರೆ.

ಇಂದು ಬೆಂಗಳೂರಿನ ಹೆಬ್ಬಾಳ ಜಂಕ್ಷನ್‌ನ ನಾಡಪ್ರಭು ಕೆಂಪೇಗೌಡರ ಪ್ರತಿಮೆ ಬಳಿ ಇಂದು ತ್ಯಾಜ್ಯದಿಂದ ಸ್ವಾತಂತ್ರ್ಯ ಜಸ್ಟ್ ಕ್ಲೀನ್ ಬೆಂಗಳೂರು ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಖಾಲಿ ನಿವೇಶನಗಳು ಕಸದ ತಾಣಗಳಾಗಿ ಬದಲಾಗುತ್ತಿದೆ. ಅದಕ್ಕಾಗಿ ಸರ್ಕಾರ ಅನಿವಾರ್ಯ ಕಠಿಣ ಕ್ರಮ ಕೈಗೊಳ್ಳಬೇಕಾಗಿದೆ ಎಂದರು. ಬಿಡಿಎ, ಬಿಬಿಎಂಪಿ ಸೈಟ್ ಇರಲಿ, ಮನೆ ಕಟ್ಟದೇ ಖಾಲಿ ಬಿಟ್ಟರೆ ಡಬಲ್ ಟ್ಯಾಕ್ಸ್ ಕಟ್ಟಬೇಕಾಗುತ್ತೆ. ಅಥವಾ ಮನೆ ಕಟ್ಟದೇ ಇದ್ರೆ ಖಾಲಿ ಸೈಟನ್ನ ವಾಪಸ್ ಕೊಡಬೇಕಾಗುತ್ತದೆ ಎಂದು ಎಚ್ಚರಿಕೆ ಕೊಟ್ಟಿದ್ದಾರೆ.

# ಕರಾವಳಿ ಪ್ರವಾಸೋದ್ಯಮ ಉತ್ತೇಜಿಸಲು ಕೈ ಜೋಡಿಸಿ

• ಉದಯವಾಹಿನಿ, ಬೆಂಗಳೂರು

ಕರ್ನಾಟಕದ ಕರಾವಳಿ ಪ್ರವಾಸೋದ್ಯಮವನ್ನು ಬಲಪಡಿಸುವ ನಿಟ್ಟಿನಲ್ಲಿ ಪ್ರವಾಸೋದ್ಯಮ ಇಲಾಖೆ ಮಂಗಳೂರಿನಲ್ಲಿ ಕ್ರೂಸ್ ಸೇವೆಗಳನ್ನು ಆರಂಭಿಸಲು ಹೊಸ ಪ್ರಯತ್ನಗಳನ್ನು ಕೈಗೊಂಡಿದೆ.

ಭಾರತದ ಪ್ರಮುಖ ಕ್ರೂಸ್ ಆಪರೇಟರ್‌ಗಳೊಂದಿಗೆ ಚರ್ಚೆ ನಡೆಸಿ, ಮಂಗಳೂರನ್ನು ಅಂತರರಾಷ್ಟ್ರೀಯ ಕ್ರೂಸ್ ಪ್ರವಾಸೋದ್ಯಮ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವ ಯೋಜನೆಗೆ ರಾಜ್ಯ ಸರ್ಕಾರ ಮುಂದಾಗಿದೆ.

ರಾಜ್ಯ ಸರ್ಕಾರ ಮುಂಬೈ ಮೂಲದ ಪ್ರವಾಸೋದ್ಯಮ ಸಂಸ್ಥೆಯೊಂದರ ಜೊತೆ ಒಪ್ಪಂದ ಮಾಡಿಕೊಂಡಿದೆ. ಪ್ರವಾಸೋದ್ಯಮ ಇಲಾಖೆಯು ಶುಕ್ರವಾರ ಮುಂಬೈನಲ್ಲಿ ವಾಟರ್‌ವೇಸ್ ಲೀಷರ್ ಟೂರಿಸಂ ಲಿಮಿಟೆಡ್ ಜೊತೆ ಸಭೆ ನಡೆಸಿದ್ದು, ಮಂಗಳೂರಿನಿಂದ ಕ್ರೂಸ್ ಪ್ರವಾಸೋದ್ಯಮವನ್ನು ಪ್ರಾರಂಭಿಸಲು ಮುಂದಾಗಿದೆ.

ಕಂಪನಿಯ ಪ್ರತಿನಿಧಿಗಳು ಆಗಸ್ಟ್‌ನಲ್ಲಿ ರಾಜ್ಯಕ್ಕೆ ಭೇಟಿ ನೀಡಲಿದ್ದಾರೆ ಮತ್ತು ಅದರ ತಾಂತ್ರಿಕ ತಂಡವು ಕರಾವಳಿ ಪ್ರವಾಸೋದ್ಯಮಕ್ಕೆ ಅಗತ್ಯವಿರುವ ಬಂದರು ಮೂಲಸೌಕರ್ಯ, ಪ್ರವಾಸೋದ್ಯಮ ಸಾಮರ್ಥ್ಯ, ಕಾರ್ಯಾಚರಣೆಯಕಾರ್ಯಸಾಧ್ಯತೆ ಮತ್ತು



ಉದಯವಾಹಿನಿ ಚಿತ್ರ

ಇತರ ವಿವರಗಳ ವಿವರವಾದ ಸ್ಥಳ ಮೌಲ್ಯಮಾಪನವನ್ನು ಕೈಗೊಳ್ಳಲಿದೆ ಎಂದು ಪ್ರವಾಸೋದ್ಯಮ ಕಾರ್ಯದರ್ಶಿ ಡಾ. ವಿ. ರಾಮ್ ಪ್ರಸಾತ್ ಮನೋಹರ್ ಹೇಳಿದರು. ರಾಜ್ಯದಲ್ಲಿ ಕ್ರೂಸ್ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ನಿಟ್ಟಿನಲ್ಲಿ, ಪ್ರವಾಸೋದ್ಯಮ ಸಚಿವ ಕೆ.ಜೆ ಜಾರ್ಜ್ ಅವರ ನಿರ್ದೇಶನದಂತೆ, ಪ್ರವಾಸೋದ್ಯಮ ಇಲಾಖೆಯು ದೇಶದ ಪ್ರಮುಖ ಕ್ರೂಸ್ ಸಂಸ್ಥೆಗಳೊಂದಿಗೆ ಸಮಾಲೋಚನೆ ನಡೆಸಲು ಶುರು ಮಾಡಿದೆ.

ಭಾರತದ ಪ್ರಮುಖ ಕ್ರೂಸ್ ಆಪರೇಟರ್‌ಗಳೊಂದಿಗೆ ಚರ್ಚೆ ನಡೆಸಿ, ಮಂಗಳೂರನ್ನು ಅಂತರರಾಷ್ಟ್ರೀಯ ಕ್ರೂಸ್ ಪ್ರವಾಸೋದ್ಯಮ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವ ಯೋಜನೆ ರಚಿಸಲು ಮುಂದಾಗಿದೆ.

# ಕಾಂಪೌಂಡ್ ನಿರ್ಮಾಣ ಕಾಮಗಾರಿಗೆ ಶಾಸಕ ಎಸ್‌ಟಿಎಸ್ ಗುದ್ದಲಿ ಪೂಜೆ

• ಉದಯವಾಹಿನಿ, ಕೆಂಗೇರಿ

ಯಶವಂತಪುರ ವಿಧಾನಸಭಾ ಕ್ಷೇತ್ರದ ಕೊಡಗೆಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಕೆಂಪೇಗೌಡ ಬಡಾವಣೆಯಲಿ ಬೆಂಗಳೂರು ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟಕ್ಕೆ ಕರ್ನಾಟಕ ಸರ್ಕಾರ ಮಂಜೂರು ಮಾಡಿರುವ 6ಎಕರೆ ಜಮೀನಿನ ಸುತ್ತ ಕಾಂಪೌಂಡ್ ನಿರ್ಮಾಣ ಕಾಮಗಾರಿಗೆ ಶಾಸಕ ಎಸ್. ಟಿ. ಸೋಮಶೇಖರ್ ಗುದ್ದಲಿ ಪೂಜೆ ನೆರವೇರಿಸಿದರು. ಬೆಂಗಳೂರು ಹಾಲು ಒಕ್ಕೂಟದ ನಿರ್ದೇಶಕ ಕೃಷ್ಣಯ್ಯ ,ಸೋಮನಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಕೇಶವ,ಸೋಮನಹಳ್ಳಿ ಹಾಲು ಉತ್ಪಾದ ಸಹಕಾರ ಸಂಘದ ಅಧ್ಯಕ್ಷ ಚಂದ್ರಶೇಖರ್ ಮೂರ್ತಿ, ಮಾಯಸಂದ್ರ ಗಿರೀಶ್, ಚಿಕ್ಕನಹಳ್ಳಿ ಮಂಜುನಾಥ್ ,ಬೊಮ್ಮುಲ್ ಹಾಲು ಉತ್ಪಾದಕ ಮುಖ್ಯಸ್ಥೆ ಅಮಿತಾ ಹೆಗಡೆ, ಬಿಡಿಎ ಅಧಿಕಾರಿಗಳು, ಹಾಗೂ ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು.

# ವೈಟ್- ಟಾಪಿಂಗ್ ಗುಣಮಟ್ಟದಲ್ಲಿ ರಾಜಿ ಬೇಡ: ಅಧಿಕಾರಿಗಳಿಗೆ GBA ಮುಖ್ಯಸ್ಥ ಮಹೇಶ್ವರ ರಾವ್ ಸೂಚನೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ನಗರದ ರಸ್ತೆಗಳ ವೈಟ್-ಟಾಪಿಂಗ್ ಕೆಲಸವನ್ನು ಗುಣಮಟ್ಟದ ವಿಷಯದಲ್ಲಿ ರಾಜಿ ಮಾಡಿಕೊಳ್ಳದೆ ನಿಗದಿತ ಸಮಯದೊಳಗೆ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತ ಎಂ. ಮಹೇಶ್ವರ್ ರಾವ್ ಸೂಚಿಸಿದ್ದಾರೆ.

ಬೆಂಗಳೂರು ಉತ್ತರ ನಗರ ನಿಗಮದ ವ್ಯಾಪ್ತಿಯಲ್ಲಿರುವ ಅಮೃತಹಳ್ಳಿ ಮುಖ್ಯ ರಸ್ತೆ, ರೈಲ್ವೆ ಫ್ಲೈಓವರ್ ಜಕ್ಕೂರು ರಸ್ತೆ (ರೈತರ ಸಂತೆ ರಸ್ತೆ), ಅಲ್ಲಾಳಸಂದ್ರ ರಸ್ತೆ, ಎಲ್ ಟಿ ರಸ್ತೆ, ರಾಜೀವ್‌ಗಾಂಧಿ ನಗರ ರೈಲ್ವೆ ಪ್ಯಾರಲಲ್ ರಸ್ತೆ ಮತ್ತು ಸಹಕಾರನಗರ 20ನೇ ಅಡ್ಡ ರಸ್ತೆಗಳಲ್ಲಿನ ಕಾಮಗಾರಿ ಸ್ಥಳಗಳನ್ನು ಅವರು ಪರಿಶೀಲಿಸಿದರು ಮತ್ತು ಕೆಲಸದ ಪ್ರಗತಿ ಮತ್ತು ಗುಣಮಟ್ಟದ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿದರು.

ಅಮೃತಹಳ್ಳಿ ಮುಖ್ಯ ರಸ್ತೆಯಲ್ಲಿ 800 ಮೀಟರ್ ವೈಟ್ ಟಾಪಿಂಗ್ ಕೆಲಸ ಪ್ರಗತಿಯಲ್ಲಿದೆ. ಫುಟ್‌ಪಾತ್ ಕೆಲಸವನ್ನು ತಕ್ಷಣ ಪ್ರಾರಂಭಿಸಲು ಮತ್ತು ಎಲ್ಲಾ ಚಟುವಟಿಕೆಗಳನ್ನು ಸಮಾನಾಂತರವಾಗಿ ಕೈಗೊಳ್ಳಲು ಅಧಿಕಾರಿಗಳಿಗೆ ನಿರ್ದೇಶಿಸಲಾಗಿದೆ.ವೈಟ್ ಟಾಪಿಂಗ್ ಕ್ಯೂರಿಂಗ್ ಕೆಲಸಕ್ಕಾಗಿ ಗೋಣಿ ಚೀಲಗಳ ಬದಲಿಗೆ 100 ಮೀಟರ್ ಉದ್ದದ ಜಿಯೋಟೆಕ್ಸ್ ಟೈಲ್‌ಶೀಟ್‌ಗಳು ಅಥವಾ ಕ್ಯೂರಿಂಗ್ ಕಂಬಳಿಗಳನ್ನು ಅಳವಡಿಸಬೇಕು ಮತ್ತು ಅವುಗಳ ಕಾರ್ಯಕ್ಷಮತೆಯನ್ನು ಪರಿಶೀಲಿಸಬೇಕು ಎಂದು ಅವರು ಹೇಳಿದರು.

ಕೆಲಸವನ್ನು ಮೇಲ್ವಿಚಾರಣೆ ಮಾಡಲು ಎಲ್ಲಾ ರಸ್ತೆಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲು ಮತ್ತು ಅರ್ಕಾವತಿ ರಸ್ತೆಯ ಡಾಂಬರೀಕರಣದ ಬಗ್ಗೆ ಬಿಡಿಎಗೆ ಅಧಿಕೃತ ಪತ್ರವನ್ನು ಕಳುಹಿಸಲು ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಕೆಲಸದ ಪ್ರಗತಿ ಮತ್ತು ಗುಣಮಟ್ಟದ ಅಲ್ಲಾಳಸಂದ್ರದಲ್ಲಿ ವೈಟ್ ಟಾಪಿಂಗ್ ಕೆಲಸದಿಂದಾಗಿ, ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲು

ಅಗೆಯುವ ಸಮಯದಲ್ಲಿ ಕೇಬಲ್‌ಗಳು ಹಾನಿಗೊಳಗಾಗಿವೆ ಎಂಬುದನ್ನು ಗಮನಿಸಿದ ಅವರು, ಯಂತ್ರಗಳ ಬದಲಿಗೆ ಕೈಯಾರೆ ಮಣ್ಣನ್ನು ಅಗೆಯಲು ನಿರ್ದೇಶಿಸಿದರು.

> ರಸ್ತೆಬದಿಯ ಪಾದಚಾರಿ ಮಾರ್ಗವನ್ನು ಅತಿಕ್ರಮಿಸಿ ಕಟ್ಟಡ ನಿರ್ಮಿಸಲಾಗುತ್ತಿರುವುದನ್ನು ಗಮನಿಸಿದ ಅವರು, ಅದನ್ನು ತಕ್ಷಣವೇ ಪರಿಶೀಲಿಸಲು ಮತ್ತು ಅತಿಕ್ರಮಣಗೊಂಡ ಭಾಗವನ್ನು ತಕ್ಷಣ ತೆರವುಗೊಳಿಸಲು ಕಟ್ಟಡ ಮಾಲೀಕರಿಗೆ ನೋಟಿಸ್ ನೀಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.- GBA ಮುಖ್ಯಸ್ಥ ಮಹೇಶ್ವರ ರಾವ್

# ಪ್ರೊಟೀನ್ ಯುಕ್ತ ಆಹಾರ ಬಳಕೆಗೆ ಉತ್ತೇಜನ: ಆರೋಗ್ಯ ಸಚಿವ ಯು ಟಿ ಖಾದರ್

## ನಿಯಮಗಳ ಅನುಷ್ಠಾನವನ್ನು ಪರಿಶೀಲಿಸಲು ಆಹಾರ ಸುರಕ್ಷತಾ ಅಧಿಕಾರಿಗಳು ನಿಯಮಿತವಾಗಿ ತಪಾಸಣೆ ನಡೆಸಲಿದ್ದಾರೆ


• ಉದಯವಾಹಿನಿ, ಬೆಂಗಳೂರು

ಶಾಲಾ-ಕಾಲೇಜುಗಳು ಹಾಗೂ ಶಿಕ್ಷಣ ಸಂಸ್ಥೆಗಳ 50 ಮೀಟರ್ ವ್ಯಾಪ್ತಿಯಲ್ಲಿ ಹೆಚ್ಚಿನ ಕೊಬ್ಬು, ಸಕ್ಕರೆ ಮತ್ತು ಉಪ್ಪು ಹೊಂದಿರುವ ಆಹಾರ ಪದಾರ್ಥಗಳ ಮಾರಾಟ, ಉಚಿತ ವಿತರಣೆ, ಜಾಹೀರಾತು ಮತ್ತು ಪ್ರಚಾರಕ್ಕೆ ವಿಧಿಸಿರುವ ನಿಷೇಧವನ್ನು ಇಂದು ಆಗಸ್ಟ್ 1ರಿಂದ ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗುವುದು ಎಂದು ಕರ್ನಾಟಕ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ ತಿಳಿಸಿದೆ. ಈ ಕುರಿತು ಆರೋಗ್ಯ ಸಚಿವ ಯು.ಟಿ. ಖಾದರ್ ಘೋಷಣೆ ಮಾಡಿದರು.

1 ಶಿಕ್ಷಣ ಸಂಸ್ಥೆಗಳ ಆವರಣದೊಳಗೆ
2 ಅಥವಾ 50 ಮೀಟರ್ ವ್ಯಾಪ್ತಿಯಲ್ಲಿ
3 ಶಾಲೆಯ ಮಕ್ಕಳಿಗೆ ಸುರಕ್ಷಿತ ಆಹಾರ

ಮಕ್ಕಳು ಮತ್ತು ಹದಿಹರೆಯದವರಲ್ಲಿ ಆರೋಗ್ಯಕರ ಆಹಾರ ಪದ್ಧತಿಯನ್ನು ಉತ್ತೇಜಿಸುವುದು ಹಾಗೂ ಜಂಕ್ ಫುಡ್ ಸೇವನೆ ಹೆಚ್ಚುತ್ತಿರುವ ಪ್ರವೃತ್ತಿಯನ್ನು ತಡೆಗಟ್ಟುವುದು ಈ ಕ್ರಮದ ಮುಖ್ಯ ಉದ್ದೇಶವಾಗಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆರೋಗ್ಯ ಸಚಿವ ಯು ಟಿ ಖಾದರ್, ಆಹಾರ ಸುರಕ್ಷತೆ ಮತ್ತು ಗುಣಮಟ್ಟ (ಶಾಲೆಯ ಮಕ್ಕಳಿಗೆ ಸುರಕ್ಷಿತ ಆಹಾರ ಮತ್ತು ಸಮತೋಲಿತ ಆಹಾರ) ನಿಯಮಾವಳಿ 2020 ಅನ್ವಯ ಶಾಲೆ ಹಾಗೂ ಕಾಲೇಜು ಆವರಣಗಳಲ್ಲಿ ಸುರಕ್ಷಿತ, ಸಮತೋಲಿತ ಮತ್ತು ಪೌಷ್ಟಿಕ ಆಹಾರವನ್ನಷ್ಟೇ ಒದಗಿಸುವಂತೆ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳಿಗೆ ಸೂಚನೆ ನೀಡಲಾಗಿದೆ ಎಂದು ಹೇಳಿದರು. ಇದಲ್ಲದೆ,





ಉದಯವಾಹಿನಿ ಚಿತ್ರ

ಶಿಕ್ಷಣ ಸಂಸ್ಥೆಗಳು ನಿಗದಿತ ಊಟದ ಸಮಯವನ್ನು ಅನುಸರಿಸಬೇಕು, ಸುರಕ್ಷಿತ ಕುಡಿಯುವ ನೀರನ್ನು ಉಚಿತವಾಗಿ ಒದಗಿಸಬೇಕು ಹಾಗೂ ಆರೋಗ್ಯಕರ ಆಹಾರ ಆಯ್ಕೆ ಮತ್ತು ಹೆಚ್ಚಿನ ಕೊಬ್ಬು, ಸಕ್ಕರೆ ಹಾಗೂ ಉಪ್ಪು ಹೊಂದಿರುವ ಆಹಾರ ಸೇವನೆಯ ದುಷ್ಪರಿಣಾಮಗಳ ಕುರಿತು ವಿದ್ಯಾರ್ಥಿಗಳಿಗೆ ನಿಯಮಿತವಾಗಿ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಬೇಕು ಎಂದು ಸೂಚಿಸಲಾಗಿದೆ. ಇತ್ತೀಚೆಗೆ ಇಲಾಖೆ ನಡೆಸಿದ ತಪಾಸಣೆಗಳಲ್ಲಿ ಹಲವು ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದ್ದ ಆಹಾರದಲ್ಲಿ ವೈಟ್ ಬ್ರೆಡ್, ಪಾಸ್ತಾ ಹಾಗೂ ಸಂಸ್ಕರಿತ ತಿಂಡಿಗಳಂತಹ ಸಂಸ್ಕರಿತ ಕಾರ್ಬೋಹೈಡ್ರೇಟ್‌ಗಳು ಅಧಿಕ ಪ್ರಮಾಣದಲ್ಲಿರುವುದು ಕಂಡುಬಂದಿದೆ. ಇಂತಹ ಆಹಾರಗಳು ರಕ್ತದಲ್ಲಿನ ಸಕ್ಕರೆಯ ಮಟ್ಟವನ್ನು ತ್ವರಿತವಾಗಿ ಹೆಚ್ಚಿಸುವುದರಿಂದ, ಅವುಗಳ ಬದಲಿಗೆ ಕಡಿಮೆ ಕೊಬ್ಬಿನ ಪ್ರೊಟೀನ್, ಆರೋಗ್ಯಕರ ಕೊಬ್ಬು ಹಾಗೂ ನಾರಿನಾಂಶ ಹೊಂದಿರುವ ಆಹಾರಗಳನ್ನು ಸಮತೋಲನವಾಗಿ ನೀಡಬೇಕು. ಇದರಿಂದ ದೀರ್ಘಕಾಲ ಶಕ್ತಿ ದೊರೆಯುವುದರ ಜೊತೆಗೆ ಏಕಾಗ್ರತೆ ಮತ್ತು ಮಕ್ಕಳ ಆರೋಗ್ಯಕರ ಬೆಳವಣಿಗೆಗೂ ಸಹಕಾರಿಯಾಗುತ್ತದೆ ಎಂದು ವರದಿಯಲ್ಲಿ ತಿಳಿಸಲಾಗಿದೆ. ಸಲಹಾ ಸೂಚನೆಯ ಪ್ರಕಾರ, ಶಾಲಾ ಊಟದಲ್ಲಿ ಧಾನ್ಯ ಮತ್ತು ಪ್ರೊಟೀನ್ ಗಳ ಸಮತೋಲಿತ ಸಂಯೋಜನೆ, ಸಂಪೂರ್ಣ ಧಾನ್ಯಗಳು, ಬೇಳೆಕಾಳುಗಳು, ಸಿರಿಧಾನ್ಯಗಳು, ಋತುಮಾನಕ್ಕೆ ತಕ್ಕ ತಾಜಾ ಹಣ್ಣುಗಳು, ಹಸಿರು ಸೊಪ್ಪುಗಳು, ಹಾಲು ಹಾಗೂ ಮೊಟ್ಟೆಗಳನ್ನು ಕಡ್ಡಾಯವಾಗಿ ಸೇರಿಸಬೇಕು. ಜೊತೆಗೆ, ಅಗತ್ಯವಿರುವ ಕಡೆಗಳಲ್ಲಿ ಪೌಷ್ಟಿಕಾಂಶಯುಕ್ತ ಗೋಧಿ ಹಿಟ್ಟು, ಅಕ್ಕಿ, ಹಾಲು, ಖಾದ್ಯ ಎಣ್ಣೆ ಮತ್ತು ಡಬಲ್ ಫೋರ್ಟಿಫೈಡ್ ಉಪ್ಪಿನ ಬಳಕೆಯನ್ನೂ ಉತ್ತೇಜಿಸಲಾಗಿದೆ.

> ಇಡ್ಲಿ, ಉಪ್ಪಿಟ್ಟು, ಅವಲಕ್ಕಿ, ಧೋಕ್ಲಾ, ಚೀಲಾ ಹಾಗೂ ಗಂಜಿಯಂತಹ ಸಾಂಪ್ರದಾಯಿಕ ಪೌಷ್ಟಿಕ ಆಹಾರಗಳನ್ನು ನೀಡುವಂತೆ ಶಿಫಾರಸು ಮಾಡಲಾಗಿದ್ದು, ಅಡುಗೆಯಲ್ಲಿ ಎಣ್ಣೆ ಮತ್ತು ತುಪ್ಪವನ್ನು ಮಿತವಾಗಿ ಬಳಸುವಂತೆ ಸೂಚಿಸಲಾಗಿದೆ.- ಆರೋಗ್ಯ ಸಚಿವ ಯು ಟಿ ಖಾದರ್

### ನಿಯಮಿತವಾಗಿ ತಪಾಸಣೆ

ನಿಯಮಗಳ ಅನುಷ್ಠಾನವನ್ನು ಪರಿಶೀಲಿಸಲು ಆಹಾರ ಸುರಕ್ಷತಾ ಅಧಿಕಾರಿಗಳು ನಿಯಮಿತವಾಗಿ ತಪಾಸಣೆ ನಡೆಸಲಿದ್ದಾರೆ. ಅಲ್ಲದೆ, ಶಿಕ್ಷಣ ಸಂಸ್ಥೆಗಳು ಎಚ್‌ಎಫ್‌ಎಸ್‌ಎಸ್ ಆಹಾರಗಳ ಮಾರಾಟ ನಿಷೇಧಿಸಿರುವ ಕುರಿತು ಪ್ರಮುಖ ಸ್ಥಳಗಳಲ್ಲಿ ಫಲಕಗಳನ್ನು ಅಳವಡಿಸಬೇಕು. ನಿಯಮ ಉಲ್ಲಂಘಿಸಿದರೆ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ ಹಾಗೂ ನಿಯಮಾವಳಿಗಳ ಅಡಿಯಲ್ಲಿ ಕ್ರಮ ಕೈಗೊಳ್ಳಲಾಗುತ್ತದೆ.

# ನಾಳೆ ರಾಜ್ಯ ಅನ್ನಪ್ರಸಾದ ಸಮಿತಿ ಸಭೆ

• **ಉದಯವಾಹಿನಿ, ತುಮಕೂರು**

ಶಬರಿಮಲೈ ಅಯ್ಯಪ್ಪ ಸೇವಾ ಸಮಾಜಂನ ರಾಜ್ಯ ಘಟಕದಿಂದ ರಾಜ್ಯ ಅನ್ನಪ್ರಸಾದ ಸಮಿತಿ ಸಭೆ ಹಾಗೂ ರಾಜ್ಯ ಕಾರ್ಯಕಾರಿಣಿ ಆಗಸ್ಟ್ 2 ರಂದು ನಗರದ ಗಾರ್ಡನ್ ರಸ್ತೆಯ ಅಯ್ಯಪ್ಪಸ್ವಾಮಿ ದೇವಸ್ಥಾನ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ಈ ಸಂಬಂಧ ರಾಷ್ಟ್ರೀಯ ಅನ್ನಪ್ರಸಾದ ಸಮಿತಿ ಅಧ್ಯಕ್ಷ ಟಿ.ಬಿ. ಶೇಖರ್ ಅವರ ಅಧ್ಯಕ್ಷತೆಯಲ್ಲಿ ದೇವಸ್ಥಾನ ಸಭಾಂಗಣದಲ್ಲಿ ನಡೆದ ತುಮಕೂರು ಸಮಿತಿ ಸಭೆಯಲ್ಲಿ ರಾಜ್ಯ ಸಮಿತಿ ಸಭೆಯ ಪೂರ್ವಭಾವಿ ಸಿದ್ಧತೆ ಕುರಿತು ಚರ್ಚಿಸಲಾಯಿತು. ಸಭೆಯಲ್ಲಿ ಮಾತನಾಡಿದ ರಾಷ್ಟ್ರೀಯ ಅನ್ನಪ್ರಸಾದ ಸಮಿತಿ ಅಧ್ಯಕ್ಷ ಟಿ.ಬಿ. ಶೇಖರ್, ಶಬರಿಮಲೈಗೆ ಹೋಗುವ ಅಯ್ಯಪ್ಪಸ್ವಾಮಿ ಭಕ್ತರಿಗೆ, ಮಾಲಾಧಾರಿಗಳಿಗೆ ಅನ್ನಪ್ರಸಾದ ವ್ಯವಸ್ಥೆ ಮಾಡುವ ಈ ಸಮಿತಿ ಕಳೆದ ವರ್ಷ 42 ಲಕ್ಷ ಜನರಿಗೆ ಅನ್ನ ಪ್ರಸಾದ ವ್ಯವಸ್ಥೆ ಮಾಡಿತ್ತು. ಈ ಬಾರಿ ಸುಮಾರು 80 ಲಕ್ಷ ಜನರಿಗೆ ಅನ್ನಪ್ರಸಾದ ನೀಡುವ ಗುರಿ ಹೊಂದಿದೆ ಎಂದು ಹೇಳಿದರು. ಗುಂಡ್ಲುಪೇಟೆ ಚೆಕ್‌ಪೋಸ್ಟ್ ಹಾಗೂ ಕಾಸರಗೋಡು ಬಳಿ ಅನ್ನಪ್ರಸಾದ ಕೇಂದ್ರಗಳನ್ನು ತೆರೆದು ಪ್ರಸಾದ ವಿತರಣೆ ಮಾಡಲಾಗುವುದು ಎಂದರು.

# ಪೂರ್ಣಗೊಳ್ಳದ ಗ್ರಾ.ಪಂ. ವಾಚನಾಲಯ ಕಟ್ಟಡ: ಆಕ್ಷೇಪ

• **ಉದಯವಾಹಿನಿ, ಚೇಳೂರು**

ಗುಬ್ಬಿ ತಾಲ್ಲೂಕಿನ ಎಂ.ಎನ್. ಕೋಟೆ ಗ್ರಾಮ ಪಂಚಾಯ್ತಿಯಲ್ಲಿ ವಾಚನಾಲಯ ನಿರ್ಮಾಣಗೊಂಡಿದ್ದು, ಅದು ವರ್ಷವಾದರೂ ಪೂರ್ಣಗೊಳ್ಳದೆ ಕಳಪೆಯಿಂದ ಕೂಡಿದೆ ಎಂದು ಎಂಎನ್ ಕೋಟೆಯ ಗ್ರಾಮ ಪಂಚಾಯ್ತಿ ಮಾಜಿ ಅಧ್ಯಕ್ಷ ನರಸಯ್ಯ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಗುಬ್ಬಿ ತಾಲ್ಲೂಕಿನ ಎಂ ಎನ್ ಕೋಟೆ ಗ್ರಾಮ ಪಂಚಾಯ್ತಿಯಲ್ಲಿ ವರ್ಷದ ಹಿಂದೆ ಪಂಚಾಯಿತಿ ಮುಂಭಾಗದಲ್ಲಿ ವಾಚನಾಲಯ ನಿರ್ಮಿಸಲು ಮಾಜಿ ಗ್ರಾಮ ಪಂಚಾಯತಿ ಅಧ್ಯಕ್ಷ ಸಿದ್ದರಾಮಯ್ಯ ಗುತ್ತಿಗೆದಾರ ಕಲ್ಲೇಶ್ ಎಂಬುವರ ಹೆಸರಿನಲ್ಲಿ 9 ಲಕ್ಷಕ್ಕೆ ವಾಚನಾಲಯ ಕಟ್ಟಡ ನಿರ್ಮಿಸಲು ಅನುಮತಿ ಪಡೆದಿದ್ದು, ಒಂದು ವರ್ಷದ ಹಿಂದೆ ಕಟ್ಟಡ ನಿರ್ಮಾಣಕ್ಕಾಗಿ 4,80,000


ಉದಯವಾಹಿನಿ ಚಿತ್ರ

ನಗದು ಉಪಯೋಗಿಸಿ ಕಟ್ಟಡ ನಿರ್ಮಿಸಿದ್ದಾರೆ.

ವರ್ಷವಾದರೂ ಕಟ್ಟಡವನ್ನು ಅರ್ಧಕ್ಕೆ ನಿಲ್ಲಿಸಿ ಕಳಪೆ ಕಾಮಗಾರಿ ಮಾಡಿದ್ದಾರೆ. ಕಟ್ಟಡದ ಒಳಗೆ ನೋಡಿದರೆ ಮೇಲ್ಛಾವಣಿಯ ಸಿಮೆಂಟ್ ಕಳಚಿ ಬಿದ್ದಿದ್ದು, ಗೋಡೆಯೂ ಸಹ ಬಿರುಕು ಬಿಟ್ಟಿದೆ. ಹೊರಗಡೆ ತಳಪಾಯಕ್ಕೆ ಹಾಕಿದ್ದ ಸಿಮೆಂಟ್ ಬರಿ ಮಣ್ಣಿನಿಂದ ಕೂಡಿದ್ದು, ಕೈಯಲ್ಲಿ ಕೆರೆದರೆ ಬೀಳುತ್ತದೆ ಎಂದು ಆರೋಪಿಸಿದರು.

ಕಟ್ಟಡವನ್ನು ಪೂರ್ಣಗೊಳಿಸದೆ ಕಳಪೆ ಕಾಮಗಾರಿ ಮಾಡಿರುವ ಗ್ರಾಮ ಪಂಚಾಯ್ತಿ ಮಾಜಿ ಅಧ್ಯಕ್ಷ ಸಿದ್ದರಾಮಯ್ಯ ಹಾಗೂ ಇಂಜಿನಿಯರ್ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಪಂಚಾಯ್ತಿ ಹಣ ದುರುಪಯೋಗ ಮಾಡಿಕೊಂಡಿರುವ ಇವರ ಮೇಲೆ ಮೇಲಾಧಿಕಾರಿಗಳು ತನಿಖೆ ನಡೆಸಿ ಹಣ ದುರುಪಯೋಗವಾಗದಂತೆ ಸೂಕ್ತ ಕಟ್ಟಡ ನಿರ್ಮಿಸಲು ಕ್ರಮ ವಹಿಸಬೇಕು ಎಂದು ಒತ್ತಾಯಿಸಿದ್ದಾರೆ.

ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳು ಕಟ್ಟಡ ವೀಕ್ಷಣೆ ಮಾಡಿದ್ದು ಜಿಲ್ಲಾ ಮಟ್ಟದ ಅಧಿಕಾರಿಗಳು ಪಂಚಾಯ್ತಿಗೆ ಭೇಟಿ ನೀಡಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವರೇ ಕಾದು ನೋಡಬೇಕು.

# ಭರ್ತಿಯಾಗುವ ಹಂತಕ್ಕೆ ಕಬಿನಿ ಜಲಾಶಯ

## ನದಿ ಪಾತ್ರದ ಜನರಿಗೆ ಪ್ರವಾಹದ ಮುನ್ನೆಚ್ಚರಿಕೆ; ಕಬಿನಿ ಜಲಾಶಯದಿಂದ 8,000 ರಿಂದ 10,000 ಕ್ಯೂಸೆಕ್ ನೀರನ್ನು ಹೊರಬಿಡುವ ಸಂಭವವಿದೆ.


• **ಉದಯವಾಹಿನಿ, ಮೈಸೂರು**

ಕೇರಳದ ವಯನಾಡಿನಲ್ಲಿ ಎಡೆಬಿಡದೆ ಸುರಿಯುತ್ತಿರುವ ಮಳೆಯ ಪರಿಣಾಮ ಹೆಚ್.ಡಿ. ಕೋಟೆ ಬಳಿ ಇರುವ ಕಬಿನಿ ಜಲಾಶಯ ಒಳ ಹರಿವಿನ ಪ್ರಮಾಣ ಹೆಚ್ಚಾಗುತ್ತಿದ್ದು, ತುಂಬುವ ಹಂತಕ್ಕೆ ಬಂದಿದೆ. ನದಿ ಪಾತ್ರದ ಜನರಿಗೆ ನೀರಾವರಿ ಇಲಾಖೆ ಪ್ರವಾಹದ ಮುನ್ನೆಚ್ಚರಿಕೆ ನೀಡಿದೆ.

ಕಬಿನಿ ಜಲಾನಯನ ಪ್ರದೇಶದಲ್ಲಿ ಮಳೆಯಾಗುತ್ತಿದ್ದು, ಜಲಾಶಯವು ಪ್ರಸ್ತುತ ಭರ್ತಿಯಾಗುವ ಹಂತದಲ್ಲಿದೆ. ಆ.1ರಂದು ಪ್ರಸ್ತುತ ಕಬಿನಿ ಜಲಾಶಯಕ್ಕೆ 15,500 ಕ್ಯೂಸೆಕ್ ಒಳ ಹರಿವು ಬರುತ್ತಿದ್ದು, ಕಬಿನಿ ಜಲಾಶಯದಿಂದ 8,000 ರಿಂದ 10,000 ಕ್ಯೂಸೆಕ್ ನೀರನ್ನು ಹೊರಬಿಡುವ ಸಾಧ್ಯತೆಯಿದೆ. ಈ ಪ್ರಮಾಣವು ಯಾವುದೇ ಕ್ಷಣದಲ್ಲಾದರೂ ಹೆಚ್ಚಾಗಬಹುದು ಎಂದು ನೀರಾವರಿ ಇಲಾಖೆ ತಿಳಿಸಿದೆ.

ಕಬಿನಿ ನದಿಯ ಪಾತ್ರದಲ್ಲಿರುವ ಮತ್ತು ನದಿಯ ಎರಡೂ ದಂಡೆಯಲ್ಲಿ ವಾಸಿಸುತ್ತಿರುವ ಜನರು ತಮ್ಮ ಆಸ್ತಿ ಪಾಸ್ತಿ ಹಾಗೂ ಜಾನುವಾರು ರಕ್ಷಣೆಗಳ ಬಗ್ಗೆ ಮುನ್ನೆಚ್ಚರಿಕೆ ವಹಿಸಿ, ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಕಬಿನಿ ಜಲಾಶಯ ವಿಭಾಗ ಕಾರ್ಯಪಾಲಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ತಡವಾಗಿ ತುಂಬುತ್ತಿರುವ ಕಬಿನಿ:** ಪೂರ್ವ ಮುಂಗಾರಿನಲ್ಲಿಯೇ ತುಂಬುವ ಹಂತಕ್ಕೆ ತಲುಪುತ್ತಿದ್ದ ಕಬಿನಿ ಜಲಾಶಯ, ಈ ಬಾರಿ ಬರಗಾಲದ ಹಿನ್ನೆಲೆಯಲ್ಲಿ ಮಳೆ ಪ್ರಮಾಣ ಕಡಿಮೆಯಾಗಿದೆ. ಆದರೆ, ಕೇರಳದ ವಯನಾಡಿನಲ್ಲಿ ಮಳೆ ಆಗುತ್ತಿರುವುದರಿಂದ


ಉದಯವಾಹಿನಿ ಚಿತ್ರ

ಆಗಸ್ಟ್ 1ರಂದು ನೀರಿನ ಪ್ರಮಾಣ ಹೆಚ್ಚಳವಾಗಿದೆ. ಇದರಿಂದ ನದಿಪಾತ್ರದ ಜನರಿಗೆ ಅಪಾಯ ಎದುರಾದರೆ, ರೈತರಿಗೆ ನಾಲೆಗಳಲ್ಲಿ ನೀರು ಹರಿಯಲಿದೆ ಎಂದು ಸಂತಸವಾಗಿದೆ.

ಕಬಿನಿ ಜಲಾಶಯ ತುಂಬುವ ಹಂತಕ್ಕೆ ಬಂದಿದ್ದು, ಜನರಿಗೆ ನೀರಾವರಿ ಇಲಾಖೆ ಪ್ರವಾಹದ ಮುನ್ನೆಚ್ಚರಿಕೆ ನೀಡಿದ್ದು, ಈ ಮೂಲಕ ತಮಿಳುನಾಡಿಗೆ ಕಾವೇರಿ ನೀರನ್ನು ಬಿಡುವ ವಿಚಾರದಲ್ಲಿ ರಾಜ್ಯಕ್ಕೆ ಸ್ವಲ್ಪ ನಿರಾಳತೆ ಆಗಲಿದೆ ಎಂದು ನಿರೀಕ್ಷಿಸಲಾಗಿದೆ.

ಕಳೆದ ಎರಡು ದಿನಗಳಿಂದ ರಾಜ್ಯದಲ್ಲಿ ತಮಿಳುನಾಡಿಗೆ ನೀರು ಬಿಡುವುದು ಬೇಡ ಎಂಬ ಹೋರಾಟಗಳು ನಡೆಯುತ್ತಿರುವಾಗಲೇ ರಾಜ್ಯದಲ್ಲಿ ಅತೀ ಬೇಗ ತುಂಬುವ ಜಲಾಶಯ ಎಂಬ ಖ್ಯಾತಿ ಪಡೆದಿರುವ ಕಬಿನಿ ಜಲಾಶಯ ತುಂಬುವ ಹಂತಕ್ಕೆ ಬಂದಿದೆ. ಕಳೆದ ಒಂದು ವಾರದಿಂದ ಕೇರಳದ ವಯನಾಡಿನಲ್ಲಿ ಸುರಿಯುತ್ತಿರುವ ಮಳೆಯಿಂದ 84 ಅಡಿ ಎತ್ತರ ಇರುವ ಕಬಿನಿ ಜಲಾಶಯ ತುಂಬುವ ಹಂತದಲ್ಲಿದ್ದು, ಜನರಿಗೆ ನೀರಾವರಿ ನಿಗಮದಿಂದ ಪ್ರವಾಹದ ಮುನ್ನೆಚ್ಚರಿಕೆ ನೀಡಲಾಗಿದೆ.

### ಕಾವೇರಿ ವಿವಾದಕ್ಕೆ ಪ್ರಕೃತಿ ಪರಿಹಾರ

**ತಮಿಳುನಾಡಿಗೆ ನಿತ್ಯವೂ 3,500 ಕ್ಯೂಸೆಕ್ ನೀರನ್ನು ಬಿಡಬೇಕೆಂಬ ಸಿಡಬ್ಲ್ಯೂಎಂಎ ಆದೇಶದ ಹಿನ್ನೆಲೆಯಲ್ಲಿ ಈಗಾಗಲೇ ಮಳೆ ಇಲ್ಲದೆ ಸಂಕಷ್ಟಕ್ಕೆ ಸಿಲುಕಿದ ಕರ್ನಾಟಕ ನೀರು ಬಿಡಲು ಸಾಧ್ಯವಿಲ್ಲ ಎಂದು ಕನ್ನಡಪರ ಸಂಘಟನೆಗಳು ಹೋರಾಟ ನಡೆಸುತ್ತಿದ್ದು, ಆಗಸ್ಟ್ 13 ರಂದು ಕರ್ನಾಟಕ ಬಂದ್‌ಗೂ ಸಹ ಕರೆ ನೀಡಲಾಗಿದೆ.ಈ ಮಧ್ಯೆ ಕೇರಳದ ವಯನಾಡಿನಲ್ಲಿ ವಿಪರೀತ ಮಳೆಯಾಗುತ್ತಿದ್ದು, ಇದರಿಂದ ಕಬಿನಿ ಜಲಾಶಯಕ್ಕೆ ಹೆಚ್ಚಿನ ನೀರು ಬರುತ್ತಿದ್ದು, ಇದರ ಜೊತೆ ಕೊಡಗಿನ ಹಾರಂಗಿ ಜಲಾಶಯವು ಭರ್ತಿಯಾಗಿದೆ. ಮತ್ತೊಂದು ಕಡೆ ಕೊಡಗಿನಲ್ಲಿ ಹೆಚ್ಚಿನ ಮಳೆಯಾಗುತ್ತಿದ್ದು, ಕೆ.ಆರ್.ಎಸ್ ಜಲಾಶಯಕ್ಕೆ ಒಳಹರಿವು ಹೆಚ್ಚಾಗಿದೆ. ಇದರಿಂದ ಕೆ.ಆರ್.ಎಸ್ ಜಲಾಶಯದ ನೀರಿನ ಮಟ್ಟ ಕೂಡ ಏರಿಕೆಯಾಗಿದೆ. ಇದೇ ರೀತಿ ಮಳೆ ಬಂದರೆ ಒಂದು ವಾರದಲ್ಲಿ ಕೆ.ಆರ್.ಎಸ್ ಜಲಾಶಯಕ್ಕೆ ಹೆಚ್ಚಿನ ನೀರು ಬರುವುದರಿಂದ ಸ್ವಾಭಾವಿಕವಾಗಿ ತಮಿಳುನಾಡಿಗೆ ನೀರು ಬಿಡಲು ಯಾವುದೇ ತೊಂದರೆ ಆಗುವುದಿಲ್ಲ. ಹೀಗೆ ನೀರಿನ ಸಮಸ್ಯೆಗೆ ಪ್ರಕೃತಿ ಪರಿಹಾರ ಕೊಡುತ್ತಿದೆ.**

# ಮಿನಿ ನ್ಯೂಸ್

## ಮಾನವ ಕಳ್ಳಸಾಗಣಿಕೆ ತಡೆಗೆ ಜಾಗೃತಿ ಅಗತ್ಯ

• **ಉದಯವಾಹಿನಿ, ಚಿಕ್ಕಬಳ್ಳಾಪುರ**

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಕ್ಕಳ ರಕ್ಷಣಾ ಘಟಕ ಹಾಗೂ ವಕೀಲರ ಸಂಘದ ಸಂಯುಕ್ತ ಆಶ್ರಯದಲ್ಲಿ ವಿಶ್ವ ಮಾನವ ಕಳ್ಳಸಾಗಣಿಕೆ ವಿರೋಧಿ ದಿನಾಚರಣೆ ಅಂಗವಾಗಿ ನಗರದ ಎಸ್‌ಜೆಸಿಐಟಿ ಕಾಲೇಜು ಆವರಣದಲ್ಲಿ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಟಿ.ಪಿ. ರಾಮ ಲಿಂಗೇಗೌಡ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ ಮಾನವ ಕಳ್ಳಸಾಗಣಿಕೆ ಸಮಾಜದ ಗಂಭೀರ ಸಮಸ್ಯೆಯಾಗಿದ್ದು, ಉದ್ಯೋಗ, ಶಿಕ್ಷಣ ಹಾಗೂ ಉತ್ತಮ ಜೀವನದ ಹೆಸರಿನಲ್ಲಿ ನಡೆಯುವ ವಂಚನೆಗಳ ಬಗ್ಗೆ ವಿದ್ಯಾರ್ಥಿಗಳು ಎಚ್ಚರಿಕೆಯಿಂದಿರಬೇಕು ಎಂದು ತಿಳಿಸಿದರು. ವಿದ್ಯಾರ್ಥಿಗಳು ತಮ್ಮ ಹಕ್ಕುಗಳು, ಕಾನೂನುಗಳ ಬಗ್ಗೆ ಅರಿವು ಹೊಂದುವುದರ ಜೊತೆಗೆ ಯಾವುದೇ ಅನುಮಾನಾಸ್ಪದ ಚಟುವಟಿಕೆ ಕಂಡುಬಂದಲ್ಲಿ ತಕ್ಷಣ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು.ಮಾನವ ಕಳ್ಳಸಾಗಣಿಕೆ ತಡೆಗೆ ಸಮಾಜದ ಪ್ರತಿಯೊಬ್ಬರ ಸಹಭಾಗಿತ್ವ ಅಗತ್ಯವಾಗಿದ್ದು, ಜಾಗೃತಿ ಮೂಡಿಸುವ ಮೂಲಕ ಈ ಪಿಡುಗನ್ನು ತಡೆಯಬಹುದು ಎಂದು ಹೇಳಿದರು.

## ಆನಲೈನ್ ಮೂಲಕ ಮತದಾರರಿಂದ ಗಣತಿ ನಮೂನೆ ಸಲ್ಲಿಕೆ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಮಾಲೂರು**

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ-2026ರ ಸಂಬಂಧ ತಾಲ್ಲೂಕಿನಲ್ಲಿ ಒಟ್ಟು 1,95,550 ಮತದಾರರಿದ್ದು ಎನುಮರೇಷನ್ ಫಾರಂ ಡಿಜಿಟಲೀಕರಣ ಶೇ. 0.39ರಷ್ಟು ಮತದಾರರು ಆನಲೈನ್ ಮೂಲಕ ಗಣತಿ ನಮೂನೆ ಸಲ್ಲಿಸಿದ್ದಾರೆ ಎಂದು ಸಹಾಯಕ ಚುನಾವಣಾ ಅಧಿಕಾರಿ ಕುಮಾರ ಸ್ವಾಮಿ ಹೇಳಿದರು.

ನಗರದ ತಾಲ್ಲೂಕು ಕಚೇರಿಯ ಸಭಾಂಗಣದಲ್ಲಿ ಬಿಎಲ್‌ಒ ಮೇಲ್ವಿಚಾರಕರು ಹಾಗೂ ಬಿಎಲ್‌ಎ ಗಳೊಂದಿಗೆ ಸಭೆ ನಡೆಸಿ ಅವರುಮಾತನಾಡಿದರು. ಉಳಿದ ಮತಗಟ್ಟೆ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಶೇ.87.81% ಡಿಜಿಟಲೀಕರಣ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ 2026 ರ ಸಂಬಂಧ ತಾಲ್ಲೂಕಿನಲ್ಲಿ ಒಟ್ಟು 1,95,550 ಮತದಾರರಿದ್ದು,ಎನುಮರೇಷನ್ ಫಾರಂ ಡಿಜಿಟಲೀಕರಣ 769(ಶೇ. 0.39ರಷ್ಟು ಮತದಾರರು ಆನಲೈನ್ ಮೂಲಕ ಗಣತಿ ನಮೂನೆಗಳನ್ನು ಸಲ್ಲಿಸಿದ್ದಾರೆ.

ಒಟ್ಟು ಮಾಲೂರು ತಾಲ್ಲೂಕಿನಲ್ಲಿ ಶೇ. 87.81% ರಷ್ಟು ಡಿಜಿಟಲೀಕರಣವಾಗಿರುತ್ತದೆ. ಈಗಾಗಲೇ ನಮೂನೆ ಪಡೆದಿರುವ ಮತದಾರರು ಮಾಹಿತಿ ಭರ್ತಿ ಮಾಡಿ ಕಡ್ಡಾಯವಾಗಿ ಬಿಎಲ್‌ಒಗೆ ಹಿಂತಿರುಗಿಸಲು ತಿಳಿಸಿದೆ. ಮತದಾರರ ಪಟ್ಟಿಯನ್ನು ಸಂಪೂರ್ಣವಾಗಿ ದೋಷರಹಿತ ಹಾಗೂ ನವೀಕರಿಸಿದ ಪಟ್ಟಿಯನ್ನಾಗಿ ಮಾಡಲು ಬಿಎಲ್‌ಒಗಳು ಮತ್ತು ಅಧಿಕಾರಿಗಳ ತಂಡ ನಿರಂತರವಾಗಿ ಶ್ರಮಿಸುತ್ತಿದೆ ಎಂದರು. ಚುನಾವಣೆ ಶಾಖೆಯ ಸಂಪತ್ ಕುಮಾರ್, ಸಹಾಯಕ ಬಾಲು, ಬಿಎಲ್‌ಒ ಹಾಗೂ ಬಿಎಲ್‌ಎಗಳು ಹಾಜರಿದ್ದರು.

## ಲೋಕ ಕಲ್ಯಾಣಕ್ಕಾಗಿ ಶ್ರೀ ನಗರೇಶ್ವರ ಸ್ವಾಮಿಗೆ ವೇದಪಾರಾಯಣ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಶಿಡ್ಲಘಟ್ಟ**

ನಗರದ ಶ್ರೀ ನಗರೇಶ್ವರ ಸ್ವಾಮಿ ದೇವಾಲಯದಲ್ಲಿ ಆಷಾಢ ಮಾಸದ ಅಂಗವಾಗಿ ಅರ್ಚಕರ ಸಂಘದ ವತಿಯಿಂದ ವಿಶೇಷ ವೇದಪಾರಾಯಣ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು.ಅರ್ಚಕ ಎಸ್. ಸತ್ಯನಾರಾಯಣ ರಾವ್ ಮಾತನಾಡಿ,ವೇದೋ ನಿತ್ಯಮಧೀಯತಾಂ ಎಂಬ ಸಂದೇಶವು ವೇದಗಳ ಅಧ್ಯಯನ ಮತ್ತು ಧಾರ್ಮಿಕ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಪ್ರೇರೇಪಿಸುತ್ತದೆ. ವೇದಮಂತ್ರಗಳ ಪಾರಾಯಣವು ಲೋಕ ಕಲ್ಯಾಣ, ವಿಶ್ವಶಾಂತಿ, ಸಕಾಲಿಕ ಮಳೆ, ರೈತರ ಸಮೃದ್ಧಿ ಹಾಗೂ ಸಮಸ್ತ ಜನರ ಸುಖ-ಶಾಂತಿಗಾಗಿ ಸಲ್ಲಿಸುವ ಮಹಾಯಜ್ಞವಾಗಿದ್ದು ಇಂತಹ ಕಾರ್ಯಕ್ರಮಗಳಿಂದ ಸನಾತನ ಧರ್ಮದ ಸಂಸ್ಕೃತಿ ಮತ್ತಷ್ಟು ಬಲಗೊಳ್ಳುತ್ತದೆ ಎಂದು ಹೇಳಿದರು.

ಶ್ರೀ ಅಯೋಧ್ಯಾನಗರ ಶಿವಾಚಾರ ವೈಶ್ಯ ನಗರ್ತ ಮಂಡಳಿ ಉಪಾಧ್ಯಕ್ಷ ಎಸ್. ನಾಗರಾಜ್ ವೇದ ಪರಂಪರೆಯನ್ನು ಉಳಿಸಿ ಬೆಳೆಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ. ಇಂತಹ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಕರೆ ನೀಡಿ ವೇದಪಾರಾಯಣದಿಂದ ಲೋಕ ಕಲ್ಯಾಣ, ವಿಶ್ವಶಾಂತಿ, ಸಕಾಲಿಕ ಮಳೆ ಹಾಗೂ ರೈತರ ಸಮೃದ್ಧಿಗೆ ಪ್ರಾರ್ಥನೆ ಸಲ್ಲಿಸುವುದು ಭಾರತೀಯ ಸಂಸ್ಕೃತಿಯ ಶ್ರೇಷ್ಠ ಪರಂಪರೆಯಾಗಿದೆ ಎಂದು ಹೇಳಿದರು.

ಅರ್ಚಕರ ಸಂಘದ ಪದಾಧಿಕಾರಿಗಳು ವೇದೋ ನಿತ್ಯಮಧೀಯತಾಂ ಎಂಬ ಧ್ಯೇಯದೊಂದಿಗೆ ವೇದಮಂತ್ರಗಳನ್ನು ಪಠಿಸಿ, ಶ್ರೀ ನಗರೇಶ್ವರ ಸ್ವಾಮಿ ದೇವರಿಗೆ ವಿಶೇಷ ಪೂಜೆ, ಅಭಿಷೇಕ ಹಾಗೂ ವಿವಿಧ ಧಾರ್ಮಿಕ ವಿಧಿವಿಧಾನಗಳನ್ನು ನೆರವೇರಿಸಿದರು.

## ತಮಿಳುನಾಡಿಗೆ ನೀರು ಬಿಡುವ ಪರಿಸ್ಥಿತಿ ನಮ್ಮಲ್ಲಿಲ್ಲ: ಚಂದನ್ ಗೌಡ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಚಾಮರಾಜನಗರ**

ಯಾವುದೇ ಕಾರಣಕ್ಕೂ ತಮಿಳುನಾಡಿಗೆ ಕಾವೇರಿ ನೀರು ಹರಿಸುವ ಪರಿಸ್ಥಿತಿ ನಮ್ಮ ರಾಜ್ಯದಿಂದ ಸಾಧ್ಯವಿಲ್ಲ ಎಂದು ರೈತ ಕಲ್ಯಾಣ ಸಂಘದ ರಾಜ್ಯಧ್ಯಕ್ಷ ಭೂಮಿಪುತ್ರ ಸಿ.ಚಂದನ್ ಗೌಡ ಅವರು ತಿಳಿಸಿದರು. ತಮಿಳುನಾಡಿಗೆ 15 ದಿನಗಳ ಕಾಲ ನಿರಂತರವಾಗಿ 3500 ಕ್ಯೂಸೆಕ್ಸ್ ನೀರು ಹರಿಸುವಂತೆ ಸಿಡಬ್ಲ್ಯೂ ಆರ್ ಸಿ ನೀಡಿರುವ ಸೂಚನೆ ಹಿನ್ನಲೆಯಲ್ಲಿ, ತಮಿಳುನಾಡಿಗೆ ನೀರು ವಿಭಜನೆ ಮಾಡುವ ಕೊಳ್ಳೇಗಾಲ ತಾಲ್ಲೂಕಿನ ಕಾವೇರಿ ಜಲಾಯನ ಪ್ರದೇಶದ ಮುಖ್ಯ ಘಟಕವಾದ ಶಿವ ಅಣೆಕಟ್ಟೆಗೆ ಖುದ್ದು ಭೇಟಿ ನೀಡಿ,ಅಲ್ಲಿನ ಚಿತ್ರಣ ಹಾಗೂ ಅಧಿಕಾರಿಗಳಿಂದ ಮಾಹಿತಿ ಪಡೆದು ಅವರು ಮಾತನಾಡಿದರು.

150 ವರ್ಷಗಳ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಜೂನ್- ಜುಲೈ ತಿಂಗಳಲ್ಲಿ ಅತ್ಯಂತ ಕಡಿಮೆ ಮಳೆಯಾಗಿದ್ದು, ಕರುನಾಡಲ್ಲಿ ಕೃಷಿ ಚಟುವಟಿಕೆಗಳಿಗೂ ನೀರಿಲ್ಲದಂತಾಗಿದೆ.ಅಲ್ಲದೇ ಅತಿ ಮುಖ್ಯವಾದ ಕುಡಿಯುವ ನೀರಿನ ಕೊರತೆಯೂ ಉಂಟಾಗಿ ಕಾವೇರಿ, ಕಬಿನಿ ಅಣೆಕಟ್ಟುಗಳಲ್ಲಿ ನೀರಿಲ್ಲದೆ ರಾಜ್ಯದ ಜನತೆ ಪರದಾಡುವಂಥ ಸ್ಥಿತಿ ನಿರ್ಮಾಣವಾಗಿದೆ ಎಂದರು.

# ಕುಶಾಲನಗರ ಹಾರಂಗಿ ಜಲಾನಯನ ಪ್ರದೇಶ ವ್ಯಾಪ್ತಿಯಲ್ಲಿ ಅಧಿಕ ಮಳೆ

• **ಉದಯವಾಹಿನಿ, ಪಿರಿಯಾಪಟ್ಟಣ**

ಜಿಲ್ಲೆಯ ಪ್ರಮುಖ ಅಣೆಕಟ್ಟೆಯಾದ ಹಾರಂಗಿ ಅಣೆಕಟ್ಟೆಯ ಜಲಾನಯನ ಪ್ರದೇಶ ವ್ಯಾಪ್ತಿಯಲ್ಲಿ ಬಾರಿ ಮಳೆ ಬಿಳುತ್ತಿರುವ ಹಿನ್ನೆಲೆಯಲ್ಲಿ ಅಣೆಕಟ್ಟೆಯ ಒಳ ಹರಿವಿನ ನೀರಿನ ಪ್ರಮಾಣವು ಹೆಚ್ಚಾದ ಹಿನ್ನೆಲೆಯಲ್ಲಿ ಅಣೆಕಟ್ಟೆಯ ಭದ್ರತಾ ಹಿತದೃಷ್ಟಿಯಿಂದ ಅಣೆಕಟ್ಟೆಯ ಮುಖ್ಯ ಕ್ರಸ್ಟ್ ಗೇಟ್‌ಗಳ ಮೂಲಕ ನದಿಗೆ 13. ಸಾವಿರ ಕ್ಯೂ ಹೆಚ್ಚು ಕ್ಯೂಸೇಕ್ಸ್ ನೀರನ್ನು ಹರಿಸಲಾಗುತ್ತಿದೆ ಎಂದು ಕಾವೇರಿ ನೀರಾವರಿ ನಿಗಮದ ಹಾರಂಗಿ ನೀರಾವರಿ ಇಲಾಖೆಯ ಕಾರ್ಯಪಾಲಕ ಅಭಿಯಂತರ ಮಹೇಶ್ ಮಾಹಿತಿ ನೀಡಿರುತ್ತಾರೆ.

ಈಗಾಗಲೇ ಅಣೆಕಟ್ಟೆಗೆ ಒಳ ಹರಿವು 11. ಸಾವಿರದ 800, ಕ್ಯೂಸೇಕ್ಸ್ ನೀರು ಹರಿದು ಬರುತ್ತಿರುವ ಹಿನ್ನೆಲೆಯಲ್ಲಿ ಅಣೆಕಟ್ಟೆಯ ಸುರಕ್ಷತಾ ದೃಷ್ಟಿಯಿಂದ ಹೆಚ್ಚುವರಿಯಾಗಿ ಬರುತ್ತಿರುವ ನೀರನ್ನು ನದಿಗೆ ಮುಖ್ಯ ಬಾಗಿಲು ಮತ್ತು ವಿದ್ಯುತ್ ಘಟಕದ ಮುಖೇನ ನದಿಗೆ ಹರಿಸಲಾಗುತ್ತಿದೆ ಎಂದು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಐ ಕೆ.ಪುಟ್ಟಸ್ವಾಮಿ ತಿಳಿಸಿದ್ದಾರೆ.

ಅಣೆಕಟ್ಟೆಯಿಂದ ಹೆಚ್ಚುವರಿಯಾಗಿ ನೀರನ್ನು ನದಿ ಹರಿಸುತ್ತಿರುವ ಹಿನ್ನೆಲೆಯಲ್ಲಿ ನದಿ ಮುಖೇನ ನದಿಗೆ ಹರಿಸಲಾಗುತ್ತಿದೆ ಎಂದು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಐ ಕೆ.ಪುಟ್ಟಸ್ವಾಮಿ ತಿಳಿಸಿದ್ದಾರೆ.

ಅಣೆಕಟ್ಟೆಯಿಂದ ಹೆಚ್ಚುವರಿಯಾಗಿ ನೀರನ್ನು ನದಿಗೆ ಹರಿಸುತ್ತಿರುವ ಹಿನ್ನೆಲೆಯಲ್ಲಿ ನದಿ ಪಾತ್ರದಲ್ಲಿ ಗ್ರಾಮಸ್ಥರು,ಸಾರ್ವಜನಿಕರು ನದಿ ಅಂಚಿಗೆ ತಮ್ಮ ಜಾನುವಾರುಗಳನ್ನು ಬಿಡದ ಹಾಗೆ ಮುನ್ನೆಚ್ಚರಿಕೆ, ಹಾಗೂ ನದಿ ತೀರದ ಮನೆಯವರು ಮುನ್ನೆಚ್ಚರಿಕೆ ವಹಿಸುವಂತೆ


ಉದಯವಾಹಿನಿ ಚಿತ್ರ

ಇಲಾಖೆಯ ವತಿಯಿಂದ ಸೂಚನೆ ನೀಡಲಾಗಿದೆ ಅದನ್ನು ಪಾಲನೆ ಮಾಡುವಂತೆ ಸಂಬಂಧಿಸಿದ ಇಲಾಖೆಯ ಇಂಜಿನಿಯರ್ ಮನವರಿಕೆ ಮಾಡಿರುತ್ತಾರೆ. ಹಾಗೂ ವ್ಯಾಪ್ತಿಯ ಗ್ರಾಮ ಪಂಚಾಯತಿಯ ಅಧಿಕಾರಿ ವರ್ಗದವರು ಸಂಬಂಧಿಸಿದ ವಿಷಯದ ಬಗ್ಗೆ ನದಿ ತೀರದ ನಿವಾಸಿಗಳಿಗೆ ತಿಳುವಳಿಕೆ ನೀಡುವಂತೆ ಮನವಿ ಮಾಡಿರುತ್ತಾರೆ.

**ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸುವಂತೆ ನೀರಾವರಿ ಇಲಾಖೆಯ ಮೂಲಕ ಈಗಾಗಲೇ ಕುಶಾಲನಗರ ಗ್ರಾಮಾಂತರ ಪೊಲೀಸ್ ಠಾಣೆಗೆ ಮಾಹಿತಿಯನ್ನು ನೀಡಲಾಗಿದೆ ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸುವಂತೆ ತಿಳಿಸಿದ್ದಾರೆ.- ಉಸ್ತುವಾರಿ ಇಂಜಿನಿಯರ್ ಕಿರಣ್ ದೇವಯ್ಯ**

# ರಾಜ್ಯ ರೈತ ಸಂಘದಿಂದ ಪ್ರತಿಭಟನೆ

• **ಉದಯವಾಹಿನಿ, ಕೊಳ್ಳೇಗಾಲ**

ತಮಿಳುನಾಡಿಗೆ ಕಾವೇರಿ ನೀರು ಬೀಡುವಂತೆ ಕಾವೇರಿ ನೀರು ನಿಯಂತ್ರಣ ಸಮಿತಿಯ ಆದೇಶವನ್ನು ಖಂಡಿಸಿ ಇಲ್ಲಿನ. ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ರಸ್ತೆ ತಡೆ ಪ್ರತಿಭಟನೆ ನಡೆಸಿದರು. ಪಟ್ಟಣದ ಮುಡಿಗುಂಡ ಸೇತುವೆ ಸಮೀಪದ ರಸ್ತೆಯಲ್ಲಿ ಜಮಾಯಿಸಿದ್ದ ರೈತ ಮುಖಂಡರು ಧಿಕ್ಕಾರ ಘೋಷಣೆ ಕೂಗುವ ಮೂಲಕ ಪ್ರತಿಭಟಿಸಿದರು.ಜಿಲ್ಲಾಧ್ಯಕ್ಷರು ಗೌಡೇಗೌಡ ಮಾತನಾಡಿ, ತಮಿಳುನಾಡು ರಾಜ್ಯದ ಬೆಳೆಗಳಿಗೆ 3.500 ಸಾವಿರ ಕ್ಯೂಸೆಕ್ ಕಾವೇರಿ ನೀರನ್ನು 15 ದಿನಗಳ ಕಾಲ ಬೀಡುವಂತೆ ಆದೇಶ ಮಾಡಿರುವುದನ್ನು ಇಂದು ನಮ್ಮ ರಾಜ್ಯ ರೈತ ಸಂಘದ ವತಿಯಿಂದ ಖಂಡಿಸುತ್ತೇವೆ. ಈಗಾಗಲೇ ನಮ್ಮ ರಾಜ್ಯದಲ್ಲಿ ಮತ್ತು ಕಾವೇರಿಯ ಕಣಿವೆಗಳಲ್ಲಿ ಮಳೆಯಾಗದೇ ಎಲ್ಲಾ ಜಲಾಶಯಗಳಲ್ಲಿ ನೀರಿಲ್ಲದ ಪರಿಸ್ಥಿತಿಯಲ್ಲಿ ಆದೇಶ ಮಾಡಿರುವುದು ನಿಜಕ್ಕೂ ಖಂಡನೀಯ ಎಂದರು.1997 ರಲ್ಲಿ ಬಂಗಾರಪ್ಪ ರವರು ಮುಖ್ಯಮಂತ್ರಿಗಾಗಿದ್ದ ಸಂಧರ್ಭದಲ್ಲಿ ಗಟ್ಟಿಧ್ವನಿಯಿಂದ ತಮಿಳುನಾಡಿಗೆ ನೀರು ಬೀಡಲ್ಲ ಅಂತ ಉತ್ತರ ನೀಡಿದ್ದಂತೆ, ಈಗಿನ ಮುಖ್ಯಮಂತ್ರಿಯಾದ ಡಿ.ಕೆ. ಶಿವಕುಮಾರ್ ರವರು ಯಾವುದೇ ಆದೇಶಗಳಿಗೆ ಮನ್ನಣೆ ನೀಡದೇ ನಮ್ಮಗೆ ಕುಡಿಯಲು ನೀರು ಇಲ್ಲದ ಸಂಧರ್ಭದಲ್ಲಿ ತಮಿಳುನಾಡು ಬೆಳೆಗೆ ನೀರು ಬೀಡಲು ಸಾಧ್ಯವಿಲ್ಲ ಎಂದು ಹೇಳಿ


ಉದಯವಾಹಿನಿ ಚಿತ್ರ

ನೀರು ಬೀಡಬಾರದು, ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ನಿಮ್ಮನ್ನು ಸಹಾ ಕಿತ್ತೋಗಿಯಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.ರಾಜ್ಯದಲ್ಲಿ ಬರದಿಂದಾಗಿ ರೈತರು ನೀರಿಲ್ಲದೇ ಸಂಕಷ್ಟ ಅನುಭವಿಸುತ್ತಿದ್ದರೂ, ಅಧಿಕಾರಕ್ಕಾಗಿ ದೆಹಲಿಯಲ್ಲಿ ಸೇರಿರುವ ಶಾಸಕರು ನಿಮ್ಮಗೆ ನಾಚಿಕೆ, ಮಾನ ಇದ್ದರೇ ಕೂಡಲೇ ರಾಜ್ಯಕ್ಕೆ ವಾಪಸ್ಸು ಆಗಿ ನಿಮ್ಮ ನಿಮ್ಮ ಕ್ಷೇತ್ರಗಳಿಗೆ ಹೋಗಿ ಏನೇನೂ ಬರ ಬಂದಿದೆ, ಎಲ್ಲೆಲ್ಲಿ ಫಸಲು ನಷ್ಟವಾಗಿದೆ ಅಂತಹವರಿಗೆ ಏಕ್ಟೆರ್ ಗೆ 50 ಸಾವಿರ ಘೋಷಣೆ ಮಾಡಬೇಕು. ಇಲ್ಲವಾದರೇ ರೈತರ ಪರಿಸ್ಥಿತಿ ಶೋಚನೆಯಾಗಲಿದೆ.

**ನೀರು ಬೀಡಿ** **ನಮ್ಮ ಜಿಲ್ಲೆಯಲ್ಲಿ ಕುಡಿಯಲು ನೀರಿಲ್ಲ, ಕೆರೆಕಟ್ಟೆಗಳಲ್ಲಿ ಒಣಗಿ ಹೋಗಿರುವುದ್ದರಿಂದ ಅಂತರಜಾಲ ಹೆಚ್ಚಲು ಹಾಗೂ ದನ, ಕರು, ಜಾನುವಾರುಗಳಿಗೆ ಅನುಕೂಲವಾಗಲು ಕಬಿನಿ ಜಲಾಶಯದಿಂದ ಕೂಡಲೇ ನೀರು ಬೀಡಿಸಬೇಕು. ಇಲ್ಲವಾದಲ್ಲಿ ಕಬಿನಿ ಜಲಾಶಯಕ್ಕೆ ನಮ್ಮ ಸಂಘಟನೆಯ ವತಿಯಿಂದ ಮುತ್ತಿಗೆ ಹಾಕಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.**

# ಪೌರಕಾರ್ಮಿಕರಿಗೆ ಆಶಾ ಕಾರ್ಯಕರ್ತರಿಗೆ ಸ್ವೆಟರ್, ಬೆರ್ಸಿಟ್ ವಿತರಣೆ

• **ಉದಯವಾಹಿನಿ, ನಂಜನಗೂಡು**

ಕಾಂಗ್ರೆಸ್ ಮುಖಂಡ ಚೇತನ್ ರವರು ಧ್ರುವನಾರಾಯಣ್ ರವರ 65ನೇ ವರ್ಷದ ಹುಟ್ಟುಹಬ್ಬದ ಪ್ರಯುಕ್ತ ಪೌರಕಾರ್ಮಿಕರಿಗೆ ಮತ್ತು ಆಶಾ ಕಾರ್ಯಕರ್ತರಿಗೆ ಬರ್ಶೀಟ್ ಮತ್ತು ಸ್ವೆಟರ್ ಮತ್ತು ವಾಟರ್ ಬಾಟಲ್‌ಗಳನ್ನು ವಿತರಣೆ ಮಾಡಿದರು.

ವಿತರಣೆ ಮಾಡಿ ಮಾತನಾಡಿದ ಅವರು ನಾನು ಧ್ರುವನಾರಾಯಣ್ ರವರ ಕಟ್ಟ ಅಭಿಮಾನಿ ಅವರ ಜೊತೆ ಹೆಚ್ಚಿನ ಒಡನಾಟ ಇತ್ತು ಅದೇ ರೀತಿ ಶಾಸಕರಾದ ದರ್ಶನ್ ಧ್ರುವ ನಾರಾಯಣ್ ಅವರ ಜೊತೆನೂ ಇದ್ದೇನೆ ಧ್ರುವನಾರಾಯಣ್ ಮತ್ತು ದರ್ಶನ್ ರವರು ಆಶಾ ಕಾರ್ಯಕರ್ತರು ಪೌರಕಾರ್ಮಿಕರು ಇವರ ಬಗ್ಗೆ ಹೆಚ್ಚಿನ ಕಾಳಜಿ ವಹಿಸುತ್ತಿದ್ದರು ಅದೇ ರೀತಿ ಶಿಕ್ಷಣಕ್ಕೂ ಹೆಚ್ಚು ಹೊತ್ತು ನೀಡಿರುತ್ತಿದ್ದಾರೆ ಆದ್ದರಿಂದ ಪ್ರತಿ ವರ್ಷವೂ ಕೂಡ ಪೌರಕಾರ್ಮಿಕರಿಗೆ ಆಶಾ ಕಾರ್ಯಕರ್ತರಿಗೆ ನನ್ನ ಕೈಲಾದಷ್ಟು ಧ್ರುವನಾರಾಯಣ್ ರವರ ಹುಟ್ಟುಹಬ್ಬದ ದಿನ ನೀಡುತ್ತಾ ಬಂದಿದ್ದೇನೆ ಮುಂದಿನ ಸಾರಿ ಇನ್ನೂ ಹೆಚ್ಚಿನ ರೀತಿ ಕಾರ್ಯಕ್ರಮಗಳನ್ನು ಮಾಡುತ್ತೇನೆ ಎಂದರು ಈ ಸಂದರ್ಭದಲ್ಲಿ ದೇಬೂರು ಅಶೋಕ ನಗರ ಸಭೆ ಮಾಜಿ ಅಧ್ಯಕ್ಷ ಚೆಲುವರಾಜು ಸೇರಿದಂತೆ ಇತರರು ಇದ್ದರೆ.

# ತಹಶಿಲ್ದಾರ್ ಶ್ರೇಯಸ್ ವಿರುದ್ಧ ಕ್ರಮ ಜರುಗಿಸುವಂತೆ ಡಿ.ಎಸ್.ವೇಣು ಒತ್ತಾಯ

• **ಉದಯವಾಹಿನಿ, ಕೆ.ಆರ್.ಪೇಟೆ.**

ಸಮಸ್ಯೆ ಹೇಳಲು ತಾಲ್ಲೂಕುಕಛೇರಿಗೆ ಬಂದ ವಯೋವೃದ್ದ ರೈತನನ್ನು ಕಛೇರಿಯ ಆವರಣದಲ್ಲಿಯೇ ತಳ್ಳಾಡಿ ಕೊಠಡಿಯೊಂದರಲ್ಲಿ ಕೂಡಾಕಿ ದಬ್ಬಾಳಿಕೆ ನಡೆಸಿದ ಕೆ.ಆರ್.ಪೇಟೆಯ ತಹಶೀಲ್ದಾರ್ ಶ್ರೇಯಸ್ ಮತ್ತು ಅವರ ಕಛೇರಿಯ ಸಿಬ್ಬಂಧಿಗಳನ್ನು ರಾಜ್ಯ ಸರ್ಕಾರ ಈ ಕೂಡಲೇ ತಾಲ್ಲೂಕಿನಿಂದ ವರ್ಗಾವಣೆ ಮಾಡಿ ಇಲಾಖಾ ತನಿಖೆ ನಡೆಸಿ ಅವರ ವಿರುದ್ಧ ಸೂಕ್ತ ಕ್ರಮ ಜರುಗಿಸುವಂತೆ ಕರ್ನಾಟಕ ರಕ್ಷಣಾ ವೇದಿಕೆಯ ಜಿಲ್ಲಾಧ್ಯಕ್ಷ ಡಿ.ಎಸ್.ವೇಣು ರಾಜ್ಯ ಸರ್ಕಾರವನ್ನು ಒತ್ತಾಯ ಮಾಡಿದ್ದಾರೆ. ತಹಶಿಲ್ದಾರರಿಂದ ದಬ್ಬಾಳಿಕೆಗೆ ಒಳಗಾದ ತಾಲ್ಲೂಕಿನ ಮಲ್ಕೋನಹಳ್ಳಿಯ ರೈತ ಅಣ್ಣಯ್ಯ ಅವರ ಜೊತೆಗೂಡಿ ಪಟ್ಟಣದ ಪ್ರವಾಸಿ ಮಂದಿರದ ಆವರಣದಲ್ಲಿ ಸುದ್ದಿಗೋಷ್ಠಿ ನಡೆಸಿದ ಕರವೇ ಕಾರ್ಯಕರ್ತರು ತಹಶಿಲ್ದಾರ್ ಶ್ರೇಯಸ್ ಮತ್ತು ಅವರ ಅಧೀನ ನೌಕರರ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿ ಘಟನೆಯ ಬಗ್ಗೆ ಸಾರ್ವಜನಿಕರ ಗಮನ ಸೆಳೆದರು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಕರವೇ ಅಧ್ಯಕ್ಷ ಡಿ.ಎಸ್.ವೇಣು ತಹಶಿಲ್ದಾರ್ ಶ್ರೇಯಸ್ ರವರು ತಾಲೋಕಿಗೆ ಬಂದ ಕೆಲವೇ ದಿನಗಳಲ್ಲಿ ಸಾರ್ವಜನಿಕರು ಮತ್ತು ರೈತರ ಮೇಲೆ ದಬ್ಬಾಳಿಕೆ ದೌರ್ಜನ್ಯ ಮಾಡುತ್ತಿರುವುದು ಕೇಳಿ ಬಂದಿದೆ. ಮೂರು



ಉದಯವಾಹಿನಿ ಚಿತ್ರ

ದಿನಗಳ ಹಿಂದೆ ಶೀಳನೆರೆ ಹೋಬಳಿಯ ಮಲ್ಕೋನಹಳ್ಳಿ ಗ್ರಾಮದ ರೈತ ಅಣ್ಣಯ್ಯ ಎಂಬುವವರು ಪೌತಿಖಾತೆ ವಿಚಾರವಾಗಿ ತಾಲ್ಲೂಕು ಕಚೇರಿಯಲ್ಲಿ ತಹಶಿಲ್ದಾರ್‌ರವರನ್ನು ಭೇಟಿ ಮಾಡಿ ಕೇಳಲು ಹೋದಾಗ ರೈತ ಅಣ್ಣಯ್ಯನ ಮೇಲೆ ದಬ್ಬಾಳಿಕೆ ನಡೆಸಿ ದೌರ್ಜನ್ಯದಿಂದ ವರ್ತಿಸಿ ರೈತನನ್ನು ಕೈ ಹಿಡಿದು ಎಳೆದು ಒಂದು ರೂಮಿನಲ್ಲಿ ಎರಡು ಮೂರು ಗಂಟೆಗಳ ಕಾಲ ಕೂಡಿಹಾಕಿ ಬೆದರಿಕೆ ಹಾಕಿದ್ದಾರೆ.

### ಜಾಲತಾಣದಲ್ಲಿ ಒಂದು ವಿಡಿಯೋ ವೈರಲ್

**ತಮ್ಮ ತಂದೆಯ ವಯಸ್ಸಿನ ವಯೋವೃದ್ದ ರೈತನ ಮೇಲೆ ತಹಶಿಲ್ದಾರ್ ಅವರು ತಮ್ಮ ಸಿಬ್ಬಂಧಿಗಳ ಜೊತೆಗೂಡಿ ನಡೆಸಿದ ದಬ್ಬಳಿಕೆಗೆ ಸಂಬಂಧಿಸಿದಂತೆ ಸಾಮಾಜಿಕ ಜಾಲತಾಣದಲ್ಲಿ ಒಂದು ವಿಡಿಯೋ ಸಹ ವೈರಲ್ ಆಗಿತ್ತು. ತದನಂತರ ಪೊಲೀಸರನ್ನು ಕರೆಸಿ ಬಂಧಿಸುವ ಎಚ್ಚರಿಕೆ ನೀಡಿ ಬಿಟ್ಟು ಕಳಿಸಿರುವುದು ತಿಳಿದು ಬಂದಿದೆ.**


# ರಾಮನಗರದ ರಸ್ತೆ, ವೃತ್ತಗಳಿಗಳಿಗೆ ಮಹನೀಯರ ಹೆಸರು - ಐತಿಹಾಸಿಕ ನಿರ್ಣಯ ಮಂಡಿಸಿದ ಕೆ.ಶೇಷಾದ್ರಿ

• **ಉದಯವಾಹಿನಿ, ರಾಮನಗರ**

ನಗರದ ಪ್ರಮುಖ ರಸ್ತೆಗಳು ಮತ್ತು ವೃತ್ತಗಳಿಗೆ ಆದರ್ಶ ಮಹನೀಯರು ಹಾಗು ಸಮಾಜದಲ್ಲಿ ಹೆಸರುಗಳಿಸಿ ಜನರ ಮನಸ್ಸಿನಲ್ಲಿ ಸ್ಥಾನ ಪಡೆದಿರುವವರ ಹೆಸರುಗಳನ್ನು ನಾಮಕರಣ ಮಾಡಲು ನಿರ್ಣಯ ಕೈಗೊಂಡು ಸರ್ಕಾರದ ಅನುಮೋದನೆಗೆ ಕಳುಹಿಸಿರುವ ಐತಿಹಾಸಿಕ ಕ್ಷಣಕ್ಕೆ ನಗರಸಭೆ ಸಾಮಾನ್ಯ ಸಭೆ ಸಾಕ್ಷಿ ಆಯಿತು.

ರಾಮನಗರ ನಗರ ಸಭೆ ಸಾಮಾನ್ಯ ಸಭೆ ಶನಿವಾರ ನಗರಸಭೆ ಅಧ್ಯಕ್ಷ ಕೆ. ಶೇಷಾದ್ರಿ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಹಲವು ದಶಕಗಳಿಂದ ನಗರಸಭೆ ಮುಖ್ಯ ರಸ್ತೆಗಳಿಗೆ ಮತ್ತು ವೃತ್ತಗಳಿಗೆ ಸಮಾಜದಲ್ಲಿ ಸ್ಥಾನ ಗಳಿಸಿದ ಮಹನೀಯರ ಹೆಸರುಗಳನ್ನು ನಾಮಕರಣ ಮಾಡುವಂತೆ ಒತ್ತಾಯ ಕೇಳಿ ಬಂದಿತ್ತು. ಇದರ ಹಿನ್ನಲೆಯಲ್ಲಿ ಜನರ ಹಿತದೃಷ್ಟಿಯನ್ನು ಗಮನದಲ್ಲಿರಿಸಿಕೊಂಡು ಅವರ ಸ್ಮರಣೆ ಶಾಶ್ವತವಾಗಿರುವಂತೆ ಹೆಸರಿಡಲು ಇಂದಿನ ಸಭೆಯಲ್ಲಿ ಪ್ರಮುಖ ನಿರ್ಣಯ ಕೈಗೊಂಡು ಸರ್ಕಾರದ ಅನುಮೋದನೆಗೆ ಕಳುಹಿಸಲಾಗುತ್ತದೆ. ಈ ಒಂದು ನಿರ್ಣಯ ರಾಮನಗರ ನಗರಸಭೆಯಲ್ಲಿ ಪ್ರಮುಖ ಮೈಲಿಗಲ್ಲಾಗಿದೆ ಎಂದು ಕೆ. ಶೇಷಾದ್ರಿ ತಿಳಿಸಿದರು.

**ವೃತ್ತಗಳ ಹೆಸರು :** ಶ್ರೀ ಜಗಜ್ಯೋತಿ ಬಸವೇಶ್ವರ ವೃತ್ತ (ಐಜೂರು) ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ವೃತ್ತ (ಆರ್ ಎಂಸಿ ಆರ್ ಯಾರ್ಡ್), ಕೆಂಗಲ್ ಹನುಮಂತಯ್ಯ ವೃತ್ತ (ಹಳೇ ಬಸ್ ನಿಲ್ದಾಣ) ಟಿಪ್ಪು ಸುಲ್ತಾನ್ ವೃತ್ತ (ರೈಲ್ವೆ ಸ್ಟೇಷನ್) ಲೂರ್ದು ಮಾತೆ ವೃತ್ತ (ಚರ್ಚ್ ಸರ್ಕಲ್) ಎ.ಕೆ.ಅಬ್ದುಲ್ ಸಮದ್ ರಸ್ತೆ, (ಹಳೇ ಜಿಲ್ಲಾಸ್ಪತ್ರೆ ರಸ್ತೆ) ಡಾ. ಬಿ.ಆರ್. ಅಂಬೇಡ್ಕರ್ ವೃತ್ತ (ನಗರಸಭೆ ವಾಟರ್ ಟ್ಯಾಂಕ್ ಸರ್ಕಲ್), ಎಂ.ಎಂ.ವೆಂಕಟಸ್ವಾಮಯ್ಯ (ಚಾಮುಂಡೇಶ್ವರಿ


ಉದಯವಾಹಿನಿ ಚಿತ್ರ

### ಸಮಾನ ಕೆಲಸಕ್ಕೆ ಸಮಾನ ವೇತನ

**ವಾರ್ಡ್ ಸಂಖ್ಯೆ 27ರಲ್ಲಿ ವಿವೇಕಾನಂದ ಪ್ರತಿಮೆ ಉನ್ನತೀಕರಣಗೊಳಿಸಲು 7 ಲಕ್ಷ ವೆಚ್ಚ ರಾಮನಗರ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಯಲ್ಲಿ ಹೊರ ಗುತ್ತಿಗೆ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿರುವ 41 ನೌಕರರಿಗೆ ಸರ್ಕಾರದ ಆದೇಶದಂತೆ ಸಮಾನ ಕೆಲಸಕ್ಕೆ ಸಮಾನ ವೇತನ ಪರಿಷ್ಕರಣೆ, ಮಂಜೂರು ಮಾಡುವ ಬಗ್ಗೆ ಸರ್ಕಾರಕ್ಕೆ ಶಿಫಾರಸ್ಸು ಸಲ್ಲಿಸುವ ಬಗ್ಗೆ ನಿರ್ಣಯ ಕೈಗೊಳ್ಳಲಾಯಿತು. ಈ ವಿಷಯಗಳ ಬಗ್ಗೆ ನಗರಸಭೆಯ ಎಲ್ಲಾ ಸದ್ಯರು ಸಮ್ಮತಿ ಸೂಚಿಸಿ ನಗರಸಭೆ ಅಧ್ಯಕ್ಷರು ಮಂಡಿಸಿದ ನಿರ್ಣಯಕ್ಕೆ ಒಪ್ಪಿಗೆ ನೀಡಿದರು.**

ದೇವಾಲಯ), ಡಾ.ಕೆ.ಪಿ.ಹೆಗ್ಡೆ ರಸ್ತೆ (ಚಾಮುಂಡೇಶ್ವರಿ ದೇವಸ್ಥಾನದ ರಸ್ತೆ), ಜಿ.ಪಿ.ರಾಜರತ್ನ ವೃತ್ತ (ಛತ್ರದ ಬೀದಿ), ನಾಗೇಶ್ ಹತ್ವಾರ್ (ವಿದ್ಯಾಪೀಠ ಪಕ್ಕದ ರಸ್ತೆ), ಶ್ರೀ ವ್ಯಾಸರಾಯರ ರಸ್ತೆ (ಅಗ್ರಹಾರ ಶ್ರೀ ಅಭಯ ಅಂಜನೇಯಸ್ವಾಮಿ ದೇವಸ್ಥಾನದ ಪಕ್ಕ) ಬಿಜಿಎಸ್ ಸರ್ಕಲ್(ಶಾಂತಿಲಾಲ್ ಲೇಔಟ್) ಛತ್ರಪತಿ ಶಿವಾಜಿ ವೃತ್ತ (ರಾಯರದೊಡ್ಡಿ ಸರ್ಕಲ್) ಮಲ್ಲೇಶ್ವರ ದೇವಾಲಯ ರಸ್ತೆ, (ಕೇಕ್‌ಪ್ಯಾಲೇಸ್ ಪಕ್ಕ), ಕುವೆಂಪು ವೃತ್ತ(ಸಂತೋಷ್ ಬಾರ್ ಪಕ್ಕ), ಬಾರ್ಷವಾಲಿ ವೃತ್ತ (ಐದು ಮೂಲೆ ವೃತ್ತ), ಬಿಸ್ಮಿಲ್ಲಾ ಸರ್ಕಲ್, (ಫ್ಯಾರಿ ಫಯಾಜ್ ಮನೆ ರಸ್ತೆ) ರೋಟರಿ ವಿವೇಕಾನಂದ ವೃತ್ತ(ರೋಟರಿ ಆಸ್ಪತ್ರೆ), ಕೆಂಪೇಗೌಡ ವೃತ್ತ(ಕೆಂಪೇಗೌಡ ಸರ್ಕಲ್), ಕಾಮನಗುಡಿ ವೃತ್ತ (ಎಂ.ಜಿ.ರೋಡ್) ಎಪಿಜೆ ಅಬ್ದುಲ್ ಕಲಾಂ (ಜೈ ಭಾರತ್ ಟೆಂಟ್ ಸರ್ಕಲ್) ಸಿ.ಎಂ ಲಿಂಗಪ್ಪ ವೃತ್ತ (ಶ್ರೀ ಅಭಯ ಆಂಜನೇಯ ಆರ್ಚ್), ಹಾಜಿ ಸೈಯದ್ ಮುನೀರ್ ನಗರ (ಹಾಜಿ ನಗರ), (ಅರ್ಕೇಶ್ವರ ಕಾಲೋನಿ ಹಿಂದೂ ರುದ್ರಭೂಮಿ ಸರ್ಕಲ್), ಹಾಜಿ ಸೈಯದ್ ಜಿಯಾವುಲ್ಲಾ ರಸ್ತೆ, (ಬೀಡಿ ಕಾಲೋನಿ), ಸಿದ್ದಲಿಂಗಯ್ಯ ವೃತ್ತ (ಗಾಂಧೀನಗರ ಗಣೇಶ್ ದೇವಾಲಯ), ಅಪ್ಸರ್ ಆಗಾ ವೃತ್ತ (ಇಂದಿರಾಗಾಂಧಿ ಕ್ಯಾಂಟೀನ್) ಶ್ರೀ ಮಂಜುನಾಥ ಸರ್ಕಲ್ (ಬಿಳಗುಂಬ ವೃತ್ತ) ನೂರಾಣಿ ಸರ್ಕಲ್, (ನೂರ್ ಸರ್ಕಲ್) ಶ್ರೀ ಡಾ.ಶಿವಕುಮಾರ ಸ್ವಾಮೀಜಿ ವೃತ್ತ, (ಐಜೂರು ಭಾವನ ಆಸ್ಪತ್ರೆ ವೃತ್ತಕ್ಕೆ) ನಾಲ್ವಡಿ ಕೃಷ್ಣರಾಜ ಒಡೆಯರ್ (ಶೋಭಾ ಹೋಟಲ್ ಸರ್ಕಲ್), ಭಕ್ತ ಕನಕದಾಸ ಸರ್ಕಲ್ (ಕನಕಪುರ ವೃತ್ತ) ಸೇರಿದಂತೆ ಹಲವಾರು ರಸ್ತೆ ವೃತ್ತಗಳಿಗೆ ಹೆಸರುಗಳನ್ನು ಸಭೆಯಲ್ಲಿ ನಿರ್ಣಹಿಸಿ ಸರ್ಕಾರಕ್ಕೆ ಅನುಮೋದನೆಗೆ ಸಲ್ಲಿಸಲಾಯಿತು. ನಗರದ ಬಿ.ಎಂ. ರಸ್ತೆಯಲ್ಲಿ ನೂತನವಾಗಿ ನಿರ್ಮಾಣ ಮಾಡಿರುವ ಫುಡ್ ಸ್ಟ್ರೀಟ್‌ನ ನೂತನ ಅಂಗಡಿಗಳಿಗೆ ಮುಂಗಡ ಠೇವಣಿ ಮತ್ತು ಬಹಿರಂಗ ಹರಾಜು ಮಾಡುವ ಬಗ್ಗೆ ಕೈಗೊಂಡ ನಿರ್ಣಯ ಹಾಗೂ ನಗರದ ಶಕ್ತಿದೇವತೆಗಳ 11 ಕರಗ ಮಹೋತ್ಸವಕ್ಕೆ ರೂ. 5 ಲಕ್ಷ ಅನುದಾನ ನೀಡುವ ಘೋಷಣೆ ಮಾಡಲಾಯಿತು.

ನಗರಸಭೆ ಆಯುಕ್ತ ಡಾ. ಜಯಣ್ಣ, ಉಪಾಧ್ಯಕ್ಷೆ ಗಿರಿಜಮ್ಮ ಗುರುವೇಗೌಡ, ಸ್ಥಾಯಿ ಸಮಿತಿ ಅಧ್ಯಕ್ಷ ಮಹಮ್ಮದ್ ಆರಿಫ್, ನಗರಸಭಾ ಸದಸ್ಯರಾದ ಪಾರ್ವತಮ್ಮ, ರಮೇಶ್, ವಿಜಯಕುಮಾರಿ, ಪವಿತ್ರ, ಸೋಮಶೇಖರ್, ಮಹಾಲಕ್ಷ್ಮಿ, ಅಕ್ಲೀಂ, ಮಂಜುಳಾ, ಪದ್ಮ, ಅಜ್ಮತ್, ನರಸಿಂಹ, ಮುತ್ತರಾಜು, ಐಯಿಷಾ ಭಾನು, ಬೈರೇಗೌಡ, ನಾಗಮ್ಮ, ಗೋವಿಂದರಾಜು, ಸಮದ್, ಮೊಹಿನ್ ಖುರೇಷಿ, ಮುನ್ ಜಿಲ್ ಆಗಾ, ನಿಜಾಂ, ಫೈರೋಜ್ ಪಾಷ, ವಜೀರ್ ಸಾಬ್, ನಗರಸಭೆ ಅಧಿಕಾರಿಗಳಾದ ಸುಬ್ರಹ್ಮಣಿ, ನಿರ್ಮಲ, ರೇಖಾ, ನಟರಾಜೇಗೌಡ, ನಾಗರಾಜು, ಜಲಮಂಡಳಿ ಎಇಇ ಪುಟ್ಟಯ್ಯ ಇದ್ದರು.

**ಬಾಕಿ ನೀರಿನ ಬಿಲ್ 22 ಕೋಟಿ ಇದ್ದು ಈ ಹಣ ಮನ್ನಾ ಮಾಡುವುದರಿಂದ ಜನರಿಗೆ ಅನುಕೂಲವಾಗಲಿದೆ ಪಕ್ಕದ ಕನಕಪುರ ನಗರಸಭೆಯಲ್ಲಿ ನೀರಿನ ಬಾಕಿ ಬಿಲ್ ಮನ್ನಾ ಮಾಡಿದ್ದಾರೆ ಅದರಂತೆ ಇಲ್ಲಿಯೂ ಕೂಡ ಬಾಕಿ ಹಣ ಮನ್ನಾ ಮಾಡಬೇಕು ಎಂದು ಸಭೆಯಲ್ಲಿ ವಿಷಯ ಪ್ರಸ್ತಾಪಿಸಿದರು. ಇದಕ್ಕೆ ಅಧ್ಯಕ್ಷ ಕೆ. ಶೇಷಾದ್ರಿ ಅವರು ಉತ್ತರ ನೀಡಿ, ಈಗಾಗಲೇ ನಾವು ನಿರ್ಣಯ ಕೈಗೊಂಡು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದೇವೆ ಮತ್ತೆ ಕೂಡ ಸಲ್ಲಿಸೋಣ ಎಂದು ರಮೇಶ್ ಪ್ರಶ್ನೆಗೆ ಉತ್ತರಿಸಿದರು. ನಗರಸಭೆ ಸದಸ್ಯ ರಮೇಶ್**

ಅಂತರಾಳದಿಂದ...
EDITORIAL

# ರಾಷ್ಟ್ರದ ಭದ್ರತೆ, ಸಮಗ್ರತೆಯ ರಕ್ಷಣೆ ವಿಚಾರದಲ್ಲಿ ರಾಜಕೀಯ ಸಲ್ಲದು




ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಶಿಕ್ಷಣ ಸಚಿವರ ರಾಜೀನಾಮೆಗೆ ಆಗ್ರಹಿಸಿ ಕಾಕ್ರೋಚ್ ಜನತಾ ಪಾರ್ಟಿ ನೇತೃತ್ವದಲ್ಲಿ ವಿದ್ಯಾರ್ಥಿಗಳು ದೇಶದ ರಾಜಧಾನಿ ಹೊಸದಿಲ್ಲಿಯ ಜಂತರ್‌ಮಂತರ್‌ನಲ್ಲಿ ನಡೆಸಿದ ಬೃಹತ್ ಪ್ರತಿಭಟನೆ ಈಗ ಮತ್ತೊಂದು ಆಯಾಮವನ್ನು ಪಡೆದುಕೊಂಡಿದೆ. ಧರ್ಮೇಂದ್ರ ಪ್ರಧಾನ್ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವುದರೊಂದಿಗೆ ಪ್ರತಿಭಟನೆಯೇನೋ ಅಂತ್ಯಗೊಂಡಿತು. ಆದರೆ ವಿದ್ಯಾರ್ಥಿಗಳ ಈ ಪ್ರತಿಭಟನೆಯಲ್ಲಿ ದೇಶದ್ರೋಹಿಗಳು, ಸಮಾಜಘಾತುಕರು, ಕ್ರಿಮಿನಲ್ ಹಿನ್ನೆಲೆಯುಳ್ಳವರು ಭಾರೀ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು ಎಂದು ದಿಲ್ಲಿ ಪೊಲೀಸರು ಮತ್ತು ಭದ್ರತ ಕಾರ್ಯಕ್ಕೆ ನಿಯೋಜಿಸಲಾಗಿದ್ದ ಭದ್ರತ ಪಡೆಗಳ ಅಧಿಕಾರಿಗಳು ಈಗ ಬೆಟ್ಟು ಮಾಡತೊಡಗಿದ್ದಾರೆ. ಇವರಿಂದಾಗಿಯೇ ಈ ಪ್ರತಿಭಟನೆ ಹಿಂಸಾರೂಪ ಪಡೆಯುವಂತಾಯಿತಲ್ಲದೆ ಪ್ರತಿಭಟನ ನಿರತರು ಕರ್ತವ್ಯನಿರತ ಪೊಲೀಸರು ಮತ್ತು ಭದ್ರತ ಸಿಬಂದಿಯ ಮೇಲೆ ದಾಳಿ ನಡೆಸಿದ್ದರು ಎಂದು ಪ್ರತಿಭಟನೆ ವೇಳೆ ದಾಳಿಗೊಳಗಾದ ಪೊಲೀಸರ ಕುಟುಂಬಸ್ಥರು ಗಂಭೀರ ಆರೋಪ ಮಾಡಿದ್ದು ತಮಗೆ ನ್ಯಾಯ ಕೊಡಿಸುವಂತೆ ಸುಪ್ರೀಂ ಕೋರ್ಟ್‌ಗೆ ಬಹಿರಂಗವಾಗಿಯೇ ಮನವಿ ಮಾಡಿಕೊಂಡಿದ್ದಾರೆ.

ಒಂದೆಡೆಯಿಂದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿಗಳ ಮೇಲೆ ಪೊಲೀಸರು ಮತ್ತು ಭದ್ರತ ಸಿಬಂದಿ ಹಲ್ಲೆ ಎಸಗಿದ್ದಾರೆ ಎಂದು ಆರೋಪಿಸಿ ಸಲ್ಲಿಸಲಾಗಿರುವ ಅರ್ಜಿಗಳ ವಿಚಾರಣೆ ಸುಪ್ರೀಂಕೋರ್ಟ್‌ನಲ್ಲಿ ನಡೆಯುತ್ತಿದ್ದರೆ ಮತ್ತೊಂದೆಡೆಯಿಂದ ದಿಲ್ಲಿ ಪೊಲೀಸರು ವಿದ್ಯಾರ್ಥಿಗಳ ಪ್ರತಿಭಟನೆಯಲ್ಲಿ ಕ್ರಿಮಿನಲ್ ಹಿನ್ನೆಲೆಯುಳ್ಳ ಸರಿಸುಮಾರು 1,000 ಮಂದಿ ಭಾಗಿಯಾಗಿದ್ದರು ಎಂದು ದೂರಿದ್ದರಲ್ಲದೆ ಈ ಕುರಿತಾದ ಸಾಕ್ಷ್ಯಾಧಾರಗಳನ್ನು ಬಿಡುಗಡೆ ಮಾಡಿ ತಮ್ಮ ನಡೆಯನ್ನು ಸಮರ್ಥಿಸಿಕೊಂಡಿದ್ದರು. ಬೆಳವಣಿಗೆಗಳ ನಡುವೆ ಪ್ರತಿಭಟನನಿರತರಿಂದ ದಾಳಿಗೊಳಗಾದ ಪೊಲೀಸ್ ಸಿಬಂದಿಯ ಕುಟುಂಬಸ್ಥರು ಮಾಧ್ಯಮಗಳ ಮುಂದೆ ಬಂದು ನ್ಯಾಯಕ್ಕಾಗಿ ಮೊರೆ ಹೋಗಿರುವುದು ಇಡೀ ಪ್ರಕರಣಕ್ಕೆ ಮಹತ್ವದ ತಿರುವನ್ನು ನೀಡಿದೆ.ರಾಜಕೀಯ ಪರ-ವಿರೋಧ ಅಭಿಪ್ರಾಯಗಳೇನೇ ಇದ್ದರೂ ಪ್ರತಿಭಟನೆಯಲ್ಲಿ ಈ ಪರಿಯಲ್ಲಿ ಕ್ರಿಮಿನಲ್ ಹಿನ್ನೆಲೆಯುಳ್ಳವರು, ರಾಷ್ಟ್ರದ್ರೋಹಿಗಳು ಪಾಲ್ಗೊಂಡಿದ್ದುದು ನಿಜವೇ ಆದರೆ ಈ ಬಗ್ಗೆ ದೇಶದ ಗುಪ್ತಚರ ಇಲಾಖೆಗಾಗಲಿ, ಭದ್ರತ ಪಡೆಗಳಿಗಾಗಲಿ ಒಂದಿನಿತೂ ಪೂರ್ವಾನುಮಾನ ಇರಲಿಲ್ಲವೇ ಎಂಬ ಗಂಭೀರ ಪ್ರಶ್ನೆ ಜನಸಾಮಾನ್ಯರನ್ನು ಕಾಡತೊಡಗಿದೆ.

> **ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಭಟನೆ, ಪ್ರತಿರೋಧ ಸಹಜವಾದುದೆ. ಆದರೆ ಇದರ ನೆಪದಲ್ಲಿ ದೇಶದ್ರೋಹಿ ಶಕ್ತಿಗಳು ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿವೆ ಎಂದಾದರೆ ಅದನ್ನು ಎಷ್ಟು ಮಾತ್ರಕ್ಕೂ ಸಹಿಸಲಾಗದು. ಇದರಲ್ಲಿ ರಾಷ್ಟ್ರದ ಭದ್ರತೆ, ಶಾಂತಿ ಮತ್ತು ಸಮಗ್ರತೆಯ ಪ್ರಶ್ನೆ ಅಡಗಿರುವುದರಿಂದ ಇಂತಹ ಪ್ರಕರಣಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಪ್ರತೀ ಬಾರಿ ಇಂತಹ ಘಟನೆ ಸಂಭವಿಸಿದಾಗಲೆಲ್ಲ ಮುಜುಗರದಿಂದ ಪಾರಾಗಲು ಸರ್ಕಾರ ಮತ್ತು ಭದ್ರತ ಪಡೆಗಳು ಗಾಳಿಯಲ್ಲಿ ಗುಂಡು ಹೊಡೆದಂತೆ' ಆರೋಪಗಳನ್ನು ಮಾಡಿ ವಾರ, ತಿಂಗಳು ಕಳೆದ ಬಳಿಕ ಮೌನಕ್ಕೆ ಶರಣಾಗುತ್ತವೆ ಎಂದಾದರೆ ಅದು ತನ್ನ ತಲೆಯ ಮೇಲೆ ಕೈಯಾರೆ ಬಂಡೆ ಹೊತ್ತುಹಾಕಿಕೊಂಡಂತೆಯೇ.**

ಹಾಗಿದ್ದರೆ ನಮ್ಮ ಗುಪ್ತಚರ ವ್ಯವಸ್ಥೆ ಮತ್ತು ಆಂತರಿಕ ಭದ್ರತ ವ್ಯವಸ್ಥೆ ಇಷ್ಟೊಂದು ದುರ್ಬಲವಾಗಿದೆಯೇ ಎಂಬ ಅನುಮಾನವೂ ಮೂಡುತ್ತದೆ. 2021ರಲ್ಲಿ ಕೇಂದ್ರ ಸರ್ಕಾರ ಜಾರಿಗೆ ತಂದಿದ್ದ ಮೂರು ಕೃಷಿ ಸುಧಾರಣ ಕಾಯ್ದೆಗಳನ್ನು ವಿರೋಧಿಸಿ ರೈತರು ನಡೆಸಿದ ಸುದೀರ್ಘ ಪ್ರತಿಭಟನೆಯ ಸಂದರ್ಭದಲ್ಲೂ ಇಂತಹುದೇ ಆರೋಪ-ಪ್ರತ್ಯಾರೋಪಗಳು ಕೇಳಿ ಬಂದಿದ್ದವು. ಭವಿಷ್ಯದಲ್ಲಿ ಈ ತೆರನಾದ ಪ್ರಮಾದ ಸರ್ಕಾರ ಮತ್ತು ಭದ್ರತ ಪಡೆಗಳಿಂದಾಗದಂತೆ ಎಚ್ಚರವಹಿಸಲೇಬೇಕು. ಅವಶ್ಯವಿದ್ದಲ್ಲಿ ಗುಪ್ತಚರ ಪಡೆಗೆ ತುರ್ತು ಚಿಕಿತ್ಸೆ ನೀಡಿ ಅದರ ಕಾರ್ಯಶೈಲಿಯಲ್ಲಿ ಅಗತ್ಯ ಮಾರ್ಪಾಡುಗಳನ್ನು ಮಾಡಬೇಕು.

## ರಾಮಾಯಣ



ರಘುವರನು ಮಾರುತಿಗೆ ಮುಕ್ತಿಸೋಪಾನದ ಉಪದೇಶ

• ಹಿಂದಿನ ಸಂಚಿಕೆಯಿಂದ 121ನೆಯ ಅಧ್ಯಾಯ

ತರುಣಿಯನ್ನು ನೋಡಿದರೂ ಕರಗಿಹೋಗುತ್ತಾನೆ ಅದರಿಂದಾಗಿ ಬುದ್ಧಿವಂತರು ಅದನ್ನು ಬಿಟ್ಟು ಬೇಗನೇ ವಿರಾಗ ಎಂಬ ದೋಣಿಯ ಮೂಲಕ ದಾಟಬೇಕು. ಅದನ್ನು ನೆನೆಸಿಕೊಂಡು ಮುಟ್ಟಿದರೆ ಮಹಾವ್ಯಾಧಿಯುಟಾಗುತ್ತದೆ, ಅದಕ್ಕೆ ಏನು ಚಿಕಿತ್ಸೆ . ಎಂಬುದನ್ನು ಹೇಳುತ್ತೇನೆ, ವಿಪ್ರನೇ, ಗಮನವಿಟ್ಟು ಕೇಳು ಮೊದಲಿಗೆ ಚಿದಚಿದಾತ್ಮಕವಾದ ಚಿತ್ತವು ಹುಟ್ಟುತ್ತದೆ, ಅದರಲ್ಲಿ ಕಾಮ ಮುಂತಾದ ಕೀಟಗಳು ಬಂದು ಸೇರಿಕೊಳ್ಳುತ್ತವೆ, ಅವುಗಳಿಂದ ಭವರೋಗವುಂಟಾಗುತ್ತದೆ, ಅದರ ತಾಪದಿಂದ ನನ್ನದು ನಾನು ಎಂಬ ಭ್ರಾಂತಿ ಉದಿಸುತ್ತದೆ, ಅದರಿಂದ ದುರ್ಮಾರ್ಗವೆಂಬ ಸನ್ನಿಯುಂಟಾಗಿ ದುರ್ವಿಧಿ ಎಂಬ ನಾಲಗೆ ಕಪ್ಪಾಗಿ ಮನೋಭ್ರಮೆಯಲ್ಲಿ ಮುಳುಗಿಸುವುದು. ಸಾಧುಸೇವೆಯ ಅಭಾವ ಮತ್ತು ಬುದ್ಧಿಮಾಂದ್ಯತೆಗಳು ಹುಟ್ಟಿ, ತಾಪದ ತೀವ್ರತೆಯಿಂದ ರೋಷ-ಚಿಂತೆಗಳು ಭಕ್ತಿಯಿಲ್ಲದಿರುವಿಕೆ ಎಂಬ ಹಸಿವು ನೀರಡಿಕೆಗಳುಂಟಾಗುತ್ತವೆ. ಮಾಧವಪಾದಸ್ಮರಣೆ ಎಂಬ ಅನ್ನದಲ್ಲಿ ಅರುಚಿಯುಂಟಾಗಿ, ಶುಭಕಥಾಶ್ರವಣಗಳಿಲ್ಲದೆ ಪುತ್ರಮಿತ್ರಕಳತ್ರಸಂಬಂಧಿಯಾದ ಹುಡಗಿ ತಳ್ಳುತ್ತದೆ. ಮೂರವಸ್ಥೆ (ಕಾರ್ಶ್ಯ, ಜಾಗರಣ, ಸಂತಾಪನ)ಗಳನ್ನುವ ದುಃಸ್ವಪ್ನದಿಂದಾಗಿ ತೇಜಸ್ಸು ಜಾರಿ, ದುವೃ ಕಿ ನೀಚತೆ ದೈನ್ಯತೆಗಳು ಸೇರಿ ಕನ್ಯ ನೀರಡಿಕೆಯಿಂದ ಪಥ್ಯವು ರುಚಿಸದೆ. ಅಜಂನಿತವಾದ ಉಪರೋಗಗಳುಂಟಾಗುತ್ತವೆ ಹಣವಿಲ್ಲ ಎಂಬ ಪಿಶಾಚಿ ಬಂದು ಸೇರುತ್ತದೆ, ವನಿತಾಚಾಪಲ್ಯವೆಂಬ ಸನ್ನಿಪಾತವುಂಟಾಗಿ,ಮಹಾತಾಪದಿಂದ ಒದ್ದಾಡುತ್ತ ಮುಂದೇನೂ ತೋಚದೆ ಅನುಗಾಲವೂ ಬಳಲುತ್ತ, ಮನಸಿನಲ್ಲಿ ಸದಾ ಸಂಸಾರದ ಚಿಂತೆ, ಮಡದಿಮಕ್ಕಳು ಬಂಧುವರ್ಗದ ಚಿಂತೆಯೇ ತುಂಬಿಕೊಂಡು ಭವರೋಗದಲ್ಲಿ ಸಿಕ್ಕಿ ನರಳು ಭವರೋಗವನ್ನು ಹೋಗಲಾಡಿಸುವ ಔಷಧಿಯು ಯಾವುದೆಂಬುದನ್ನು ಹೇಳುತ್ತೇನೆ: ವಿವೇಕಶಾಲಿಯಾಗಿ ಗುರುವನ್ನು ಆಶ್ರಯಿಸಿ, ನಾನಾ ಬಗೆಯಲ್ಲಿ ಭಕ್ತಿಯನ್ನು ಅನುಸರಿಸಿ, ಮೊದಲಿಗೆ ರಾಮನಾಮ ಎಂಬ ಕಷಾಯವನ್ನು ಸೇವಿಸಬೇಕು ಆಗ ಮನಸ್ಸಿನ ಕೊಳೆ ಹೊರಟುಹೋಗುತ್ತದೆ, ಶಾಂತಿಕರ್ಮಗಳನ್ನು ಮಾಡಿದರೆ ರೋಗದ ತೀವ್ರತೆಯು ತಗ್ಗುತ್ತದೆ; ಆನಂತರ ಸಾಧನಚತುಷ್ಟಯ (ದರ್ಶನ, ಶ್ರವಣ, ಮನನ, ನಿಧಿಧ್ಯಾಸನ) ಎಂಬ. ಮೂಲಿಕೆಗಳನ್ನು ತೆಗೆದುಕೊಂಡು ಗುರುವಿನ ಉಪದೇಶದಿಂದ ಲಭಿಸಿದ ಶ್ರವಣ ಎಂಬ ಚೂರ್ಣವನ್ನು ತೆಗೆದುಕೊಳ್ಳಬೇಕು, ಸರ್ವಸ್ವದಾನದಿಂದ ಚಿತ್ತಶುದ್ಧಿಯನ್ನು ಮಾಡಿಕೊಳ್ಳಬೇಕು ಆನಂತರ ಹೋಮವನ್ನು ಮಾಡಿ ಕಾಮವೇ ಮುಂತಾದವನ್ನು ಸಾಧನೆ ಎಂಬ ತಪೋಗ್ನಿಯಲ್ಲಿ ಹಾಕಿ, ಸಾ ತೃಪ್ತಿ ಸುಖ ಎಂಬಿವುಗಳನ್ನು ಹೃದಯದಲ್ಲಿ ಇಡಲು ಪಿಶಾಚವು ಹೊರಟುಹೋಗುತ್ತದೆ. ಮಾನ ದಂಭ ಮನಡಿವೆ ತತ್ವಾಭ್ಯಾಸ ಬಲದಿಂದ ನೀಗಿ ಕಾಮಿನೀಗ್ರಹವು ಹೊರಟುಹೋಗಿ ಭ್ರಮೆಗಳೆಲ್ಲವೂ ಕೊನೆಗೊಳ್ಳುತ್ತವೆ. ಜ್ಞಾನಾಂಜನದಿಂದ ಹಿತ-ಅಹಿತಗಳ ವಿಚಾರವೆಂಬ ಲೇಪನದ ಎದುರು ನಿಲ್ಲದೆ ಕಾಮಜ್ವರವು ಬಿಟ್ಟು ದೋಷಗಳೂ ತೊಲಗಿ ಮನಸ್ಸು ಶುಚಿಯಾಗುತ್ತದೆ. ವಿವೇಕ ಎಂಬ ಔಷಧವನ್ನು ಕ್ರಮವಾಗಿ ಸೇವಿಸುತ್ತ, ಗುರೂಪದೇಶ ಎಂಬ ಮಾತ್ರೆಗಳನ್ನು ನುಂಗುತ್ತಿದ್ದರೆರೋಗಗಳೆಲ್ಲ ಮಾಯವಾಗುವುವು. ಸಾಧನಚತುಷ್ಟಯಗಳು ಅಳವಡುವವರೆಗೂ ಯುವತಿಯರ ಹೆಸರು, ಅವರ ಸಾಮೀಪ್ಯ-ಮಾತುಕತೆಗಳು, ಪರಿಮಳಲೇಪನ, ನಿದ್ರೆ, ಆಲಸ್ಯ, ಮೃಷ್ಟಾನ್ನಭೋಜನ ಮುಂತಾದವುಗಳನ್ನು ತೊರೆಯಬೇಕು. ಭೋಗೇಚ್ಛೆ, ಶುಷ್ಕತರ್ಕ, ಅಭಿಮಾನ, ಸ್ವಜನಸಂಪರ್ಕ, ಪ್ರಾಯಶ್ಚಿತ್ತ, ನಿಗ್ರಹ-ಅನುಗ್ರಹಗಳನ್ನು ತ್ಯಜಿಸಬೇಕು ನಾಸಿಕತ್ತ ಹುಸಿಗಳು ನುಸುಳದಂತೆ ದೂರಮಾಡಿ, ಹಿಂಸೆ ಮುಂತಾದುಗಳನ್ನು ತೊರೆದು, ವ್ಯರ್ಥಾಲಾಪ ದೈನ್ಯ ಮೊದಲಾದುವನ್ನು ಪಕ್ಕಕ್ಕೆ ಸರಿಸಬೇಕು. ಭೂತದ್ರೋಹ, ವಂಚನೆ, ಅಶುಚಿ, ಚಾಪಲ್ಯಗಳಿಗೆ ಎಡೆಕೊಡದೆ, ಶಿಶ್ನೋದರಗಳ ಅನುಸರಣೆ ಮಾಡದೆ, ಅಮಂಗಳಗಳನ್ನು ಯೋಚಿಸದೆ, ಗೋತ್ರ ಜಾತಿಗಳ ಅಭಿಮಾನವನ್ನು ಬಿಡಬೇಕು.

ದುರಾನ್ನ-ಏಕಾನ್ನಗಳನ್ನು ಬಿಟ್ಟು, ವಾಣಿಜ್ಯ ಕೆಟ್ಟ ಮಾತುಗಳನ್ನು ತೊರೆದು, ಚಾಡಿಕೋರತನ-ಪರನಿಂದೆಗಳನ್ನು ಮಾಡದ ಪಥ್ಯವನ್ನು ಅನುಸರಿಸಿದರೆ ಭವರೋಗ ನಾಶವಾಗುತ್ತದೆ. ಆನಂತರ ಗುರುದೇವತಾಭಕ್ತಿ ಯಜನ, ಭೂತಹಿತ, ಸುಖದುಃಖಸಮತ್ತಗಳಿಂದ ಕೂಡಿ ನಿಯಮವನ್ನುಪಾಲಿಸಬೇಕು. ಹೊಗಳಿಕೆ-ತೆಗಳಿಕೆ, ಅವಮಾನ-ಸನ್ಮಾನ, ಹಿತ-ಅಹಿತ, ಕಬ್ಬಿಣಚಿನ್ನಗಳನ್ನು ಸಮಾನವೆಂದು ಭಾವಿಸುತ್ತ, ಆರಾಧನೆ-ಪೂಜನೆಗಳಲ್ಲಿ ತೊಡಗಿಕೊಂಡು, ವೇದಾಂತಪರಿಚರಣೆ, ಭಗವಂತನ ಧ್ಯಾನ. ತಂದೆತಾಯಿಯರ ಸೇವೆಗಳು ಸೇರಿದರೆ ಭವರೋಗವು ಹೋಗುತ್ತದೆ. ಶ್ರವಣ ಮನನ ಧ್ಯಾನ ಏಕಾಂತಸೇವೆಗಳು ಗುರುಮಾರ್ಗ, ಆಚಾರವಿರಹತ್ವ, ಕ್ಷೇತ್ರಜ್ಞ-ಚೈತನ್ಯರ ಐಕ್ಯದ ಬಗೆಗಿನ ಅನುಸಂಧಾನಗಳನ್ನು ಅಳವಡಿಸಿಕೊಂಡರೆ ಅಜ್ಞಾನವು ನಾಶಗೊಂಡು, ತೃಷ್ಣ ಎಂಬ ಜ್ವರವು ತಣ್ಣಗಾಗಿ, ವಾಸನೆಗಳು ಸುವಿವೇಕದ ಬಿಸಿಯಿಂದ ಕರಗುತ್ತವೆ ಆಗ ಭವರೋಗದ ಲೇಶವೂ ಉಳಿದಿರುವುದಿಲ್ಲ' ಎಂದು ಹೇಳಿ, 'ಶಾಸ್ತ್ರವೆಂಬ ಹಾಲುಗಡಲನ್ನು ಕಡೆಯಲು ಹುಟ್ಟಿದ ಘನಸುಖವನ್ನು ನೀಡುವ ಗುರುವಾಕ್ಕ ಎಂಬ ಅಮೃತವನ್ನು ಕುಡಿದು ರಾಜೀವಾಕ್ಷನ ಭಕ್ತಿ ಎಂಬ ಮೂಲಿಕೆಯನ್ನು ತೇಯ್ದು ನಾಲಗೆಗೆ ಬಳಿದುಕೊಂಡು, ದೇಹಮನಸ್ಸುಗಳನ್ನು ಒಂದುಗೂಡಿಸಿಕೊಂಡು ಸುಖವಾಗಿರಬೇಕು.

ಮುಂದುವರೆಯುವುದು

# ವಿಶ್ವ ಶ್ವಾಸಕೋಶ ಕ್ಯಾನ್ಸರ್ ದಿನ 2026: ಶ್ವಾಸಕೋಶದ ಕ್ಯಾನ್ಸರ್ ತಡೆಗಟ್ಟಲು ತೆಗೆದುಕೊಳ್ಳಬೇಕಾದ ಕ್ರಮಗಳೇನು?

ಧೂಮಪಾನ ಮಾಡದಿದ್ದರೆ ಶ್ವಾಸಕೋಶದ ಕ್ಯಾನ್ಸರ್ ಬರುವುದಿಲ್ಲ ಎಂದು ಅನೇಕರು ಭಾವಿಸುವುದು ತುಂಬಾ ದೊಡ್ಡ ತಪ್ಪು. ಶ್ವಾಸಕೋಶದ ಕ್ಯಾನ್ಸರ್ ಅಪಾಯವನ್ನು ಹೆಚ್ಚಿಸುವ ಸಂದರ್ಭಗಳನ್ನು ಅರ್ಥಮಾಡಿಕೊಳ್ಳುವುದು ಹಾಗೂ ನಿರ್ಲಕ್ಷಿಸದೆ ಇರುವ ಎಚ್ಚರಿಕೆ ಚಿಹ್ನೆಗಳನ್ನು ಗುರುತಿಸುವುದು ತುಂಬಾ ಮುಖ್ಯವಾಗುತ್ತದೆ. ಪ್ರಪಂಚದಾದ್ಯಂತ ಉಸಿರಾಟ ಹಾಗೂ ಶ್ವಾಸಕೋಶದ ಕಾಯಿಲೆಗಳ ಪ್ರಕರಣಗಳು ವೇಗವಾಗಿ ಏರಿಕೆಯಾಗುತ್ತಿವೆ. ವಿಶ್ವ ಆರೋಗ್ಯ ಸಂಸ್ಥೆ ವರದಿ ತಿಳಿಸುವ ಪ್ರಕಾರ, ವಿಶ್ವದಾದ್ಯಂತ ಶ್ವಾಸಕೋಶದ ಕ್ಯಾನ್ಸರ್ ಪ್ರಕರಣಗಳು ಏರಿಕೆಯಾಗುತ್ತಿವೆ ಹಾಗೂ ಈ ಕಾಯಿಲೆಯಿಂದ ಸಾವು ಹೆಚ್ಚಾಗುತ್ತಿವೆ. ಪ್ರತಿವರ್ಷ ಅಂದಾಜು 2.5 ಮಿಲಿಯನ್ ಹೊಸ ಪ್ರಕರಣಗಳು ವರದಿಯಾಗುತ್ತವೆ. ಇದರ ಪರಿಣಾಮವಾಗಿ 1.8 ಮಿಲಿಯನ್ ಸಾವುಗಳು ವರದಿಯಾಗುತ್ತಿವೆ. ಕೆಲವು ದಶಕಗಳ ಹಿಂದೆ ವಯಸ್ಸಾದವರಿಗೆ ಮಾತ್ರ ಈ ಕಾಯಿಲೆ ಬರುತ್ತಿತ್ತು. ಇದೀಗ ಚಿಕ್ಕ ವಯಸ್ಸಿನವರೂ ಕೂಡ ಶ್ವಾಸಕೋಶದ ಕ್ಯಾನ್ಸರ್‌ಗೆ ಬಲಿಯಾಗುತ್ತಿದ್ದಾರೆ. ಶ್ವಾಸಕೋಶದ ಕ್ಯಾನ್ಸರ್ ಧೂಮಪಾನಿಗಳ ಮೇಲೆ ಮಾತ್ರ ಪರಿಣಾಮ ಬೀರುತ್ತದೆ ಎನ್ನುವುದು ಹಲವರ ಭಾವನೆಯಾಗಿದೆ. ಜೀವನದಲ್ಲಿ ಎಂದಿಗೂ ಸಿಗರೇಟ್, ಬೀಡಿ ಸೇದದೆ ಇರುವವರು ಹೆಚ್ಚಿನ ಸಂಖ್ಯೆಯಲ್ಲಿ ಈ ಕಾಯಿಲೆಯಿಂದ ಬಳಲುತ್ತಿದ್ದಾರೆ ಎಂದು ಸಂಶೋಧಕರು ತಿಳಿಸುತ್ತಾರೆ.

ಇತ್ತೀಚಿನ ದಿನಗಳಲ್ಲಿ ಧೂಮಪಾನ ಮಾಡದವರಲ್ಲಿ ಶ್ವಾಸಕೋಶದ ಕ್ಯಾನ್ಸರ್ ಪ್ರಕರಣಗಳು ಹೆಚ್ಚುತ್ತಿರುವುದು ಕಂಡುಬಂದಿದೆ. ವಾರ್ಷಿಕವಾಗಿ ಆಗಸ್ಟ್ 1ರಂದು ವಿಶ್ವ ಶ್ವಾಸಕೋಶದ ಕ್ಯಾನ್ಸರ್ ದಿನವನ್ನು ಆಚರಿಸಲಾಗುತ್ತದೆ. ಈ ಕಾಯಿಲೆಯ ಕುರಿತು ಜಾಗೃತಿ ಮೂಡಿಸಲು, ಆರಂಭಿಕವಾಗಿ ಪತ್ತೆ ಹಚ್ಚುವಿಕೆ ಉತ್ತೇಜಿಸಲು ಹಾಗೂ ರೋಗದಿಂದ ಬಳಲುತ್ತಿರುವವರಿಗೆ ಬೆಂಬಲ ನೀಡುವುದು ಈ ದಿನದ ಉದ್ದೇಶವಾಗಿದೆ. 2012ರಲ್ಲಿ ಅಂತಾರಾಷ್ಟ್ರೀಯ ಉಸಿರಾಟದ ಸಂಘಗಳ ವೇದಿಕೆ ಆರಂಭಿಸಲಾಯಿತು. ಧೂಮಪಾನದ ಜೊತೆಗೆ ವಾಯು ಮಾಲಿನ್ಯ, ಸೆಕೆಂಡ್ ಹ್ಯಾಂಡ್ ಹೊಗೆ, ಮರದ ಹಾಗೂ ಕಲ್ಲಿದ್ದಲಿನ ಹೊಗೆಗೆ ದೀರ್ಘಕಾಲದವರೆಗೆ ಒಡ್ಡಿಕೊಳ್ಳುವುದು, ಕೆಲವು ರಾಸಾಯನಿಕ ಪದಾರ್ಥಗಳ ಸಂಪರ್ಕದಂತಹ ಅಂಶಗಳು ಶ್ವಾಸಕೋಶದ ಕ್ಯಾನ್ಸರ್ ಅಪಾಯ ಹೆಚ್ಚಿಸಬಹುದು ಎಂದು ಸಂಶೋಧನೆಗಳು ಸೂಚಿಸುತ್ತವೆ. ಶ್ವಾಸಕೋಶದ ಕ್ಯಾನ್ಸರ್ ಸಾಮಾನ್ಯವಾಗಿ ಆರಂಭಿಕ ಹಂತಗಳಲ್ಲಿ ಚಿಹ್ನೆಗಳು ಕಾಣಿಸುವುದಿಲ್ಲ ಎಂದು ವೈದ್ಯರು ಹೇಳುತ್ತಾರೆ.

## ವಿದ್ಯಾರ್ಥಿ ವಿಜಯ

ಡಾ.ಸುಧಾಕರ್ . ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

40



> **ದಿನನಿತ್ಯದ ಜೀವನದಲ್ಲಿ ಶುಚಿತ್ವದ ಅಭ್ಯಾಸಗಳು ಅವಿಭಾಜ್ಯ ಅಂಗವಾಗಬೇಕು. ನಿಯಮಿತ ಸ್ನಾನ, ಸ್ವಚ್ಛ ವಸ್ತ್ರಧಾರಣೆ, ಸಾಬೂನಿನಿಂದ ಕೈಗಳ ಪ್ರಕ್ಷಾಲನೆ - ಇಂತಹ ಸರಳ ಕೃತ್ಯಗಳು ಸೋಂಕುಗಳಿಂದ ರಕ್ಷಣೆ ನೀಡುತ್ತವೆ.**

# ಶುಚಿತ್ವವೇ ಆರೋಗ್ಯದ ಆಧಾರ

ವಿದ್ಯಾರ್ಥಿ ಜೀವನ ಎಂದರೆ ನಿರಂತರ ಸಾಧನೆಯ ಹಾದಿ. ಆ ಹಾದಿಯಲ್ಲಿ ವಿಜಯದ ಶಿಖರ ಏರಬೇಕಾದರೆ ದೈಹಿಕ ಮತ್ತು ಮಾನಸಿಕ ಸದೃಢತೆ ಅನಿವಾರ್ಯ. ಈ ಸದೃಢತೆಯ ಪ್ರಥಮ ಸೋಪಾನವೆಂದರೆ ವೈಯಕ್ತಿಕ ಶುಚಿತ್ವ. ಇದು ಬಾಹ್ಯ ಪ್ರದರ್ಶನಕ್ಕಾಗಿ ಮಾತ್ರವಲ್ಲ, ಸಮಗ್ರ ಆರೋಗ್ಯದ ಹಿತದೃಷ್ಟಿಯಿಂದಲೂ ಅತ್ಯಗತ್ಯ.

ಆಹಾರ ಸೇವನೆಗೆ ಮುನ್ನ ಹಾಗೂ ಹೊರಾಂಗಣದಿಂದ ಮರಳಿದ ಬಳಿಕ ಕೈಗಳನ್ನು ತೊಳೆಯುವುದು ಕಡ್ಡಾಯ. ಇದೇ ರೀತಿ ವಿದ್ಯಾಭ್ಯಾಸದ ಸ್ಥಳ, ವಾಸದ ಮನೆ ಮತ್ತು ಸುತ್ತಮುತ್ತಲಿನ ಪರಿಸರವನ್ನು ನಿರ್ಮಲವಾಗಿಡುವುದರಿಂದ ರೋಗಕಾರಕ ಸೂಕ್ಷ್ಮಾಣುಗಳ ಹರಡುವಿಕೆಗೆ ಕಡಿವಾಣ ಬೀಳುತ್ತದೆ. ವೈದ್ಯಕೀಯ ದೃಷ್ಟಿಯಿಂದಲೂ ಶುಚಿತ್ವಕ್ಕೆ ಮಹತ್ವದ ಸ್ಥಾನವಿದೆ. ಮೈಲಿಗೆಯಿಂದ ಸೂಕ್ಷ್ಮಾಣುಗಳು ದೇಹ ಪ್ರವೇಶಿಸಿ ವಿವಿಧ ರೋಗಗಳಿಗೆ ಎಡೆಮಾಡಿಕೊಡುತ್ತವೆ. ಇದಕ್ಕೆ ವಿರುದ್ಧವಾಗಿ,



ನಿರಂತರ ಶುಚಿತ್ವವು ರೋಗನಿರೋಧಕ ಶಕ್ತಿಯನ್ನು ವರ್ಧಿಸುತ್ತದೆ. ನಿರ್ಮಲ ದೇಹದಲ್ಲಿ ನಿರ್ಮಲ ಚಿಂತನೆಗಳು ಮೂಡುತ್ತವೆ. ಇದು ವಿದ್ಯಾರ್ಥಿಯ ಏಕಾಗ್ರತೆ ಮತ್ತು ಮಾನಸಿಕ ಸ್ಪಷ್ಟತೆಗೆ ಪೂರಕವಾಗುತ್ತದೆ. ಒಟ್ಟಿನಲ್ಲಿ ಶುಚಿತ್ವವನ್ನು ಜೀವನಕ್ರಮವನ್ನಾಗಿ ಅಳವಡಿಸಿಕೊಂಡ ವಿದ್ಯಾರ್ಥಿಯಲ್ಲಿ ಶಿಸ್ತು, ಜವಾಬ್ದಾರಿ ಹಾಗೂ ಆತ್ಮವಿಶ್ವಾಸ ಸಹಜವಾಗಿ ಬೆಳೆಯುತ್ತವೆ.ಶುಚಿತ್ವವೇ ಆರೋಗ್ಯಕರ ಬದುಕಿನ ಮೊದಲ ಮೆಟ್ಟಿಲು. ಆ ಮೆಟ್ಟಿಲು ಏರಿದವನಿಗೆ ಸಾಧನೆಯ ಉತ್ತುಂಗ ತಲುಪುವುದು ದೂರವೇನಲ್ಲ.

# ಹೆರಿಗೆಯಾದ ನಂತರ ಹಾಲುಣಿಸುವ ತಾಯಿ ಪೊರಕೆ ಏಕೆ ಮುಟ್ಟಬಾರದು? ಇಲ್ಲಿದೆ ಸಂಪ್ರದಾಯದ ಹಿಂದಿನ ರಹಸ್ಯ!

ಗರ್ಭಾವಸ್ಥೆಯಿಂದ ಹಿಡಿದು ಹೆರಿಗೆಯ ನಂತರದ ದಿನಗಳವರೆಗೆ, ನಮ್ಮ ಹಿರಿಯರು ಅನೇಕ ನಿಯಮಗಳನ್ನು ಪಾಲಿಸಬೇಕೆಂದು ಸೂಚಿಸುತ್ತಾರೆ. ಅಂತಹ ನಿಯಮಗಳಲ್ಲಿ ಪ್ರಮುಖವಾದದ್ದು ಹೆರಿಗೆಯ ನಂತರ ಮಹಿಳೆಯರು ಪೊರಕೆಯನ್ನು ಮುಟ್ಟಬಾರದು ಅಥವಾ ಮನೆ ಗುಡಿಸಬಾರದು ಎಂಬುದು. ಮೇಲ್ನೋಟಕ್ಕೆ ಇದು ಕೇವಲ ಮೂಢನಂಬಿಕೆಯಂತೆ ಕಂಡರೂ, ಇದರ ಹಿಂದೆ ತಾಯಿ ಮತ್ತು ಮಗುವಿನ ಆರೋಗ್ಯವನ್ನು ರಕ್ಷಿಸುವ ಆಳವಾದ ಆಯುರ್ವೇದಿಕ ಹಾಗೂ ವೈಜ್ಞಾನಿಕ ಕಾರಣಗಳಿವೆ. ನವಜಾತ ಶಿಶುವಿಗೆ ಜನ್ಮ ನೀಡಿದ ನಂತರ ಮಹಿಳೆಯ ದೇಹ ಮತ್ತು ಮನಸ್ಸು ಅತ್ಯಂತ ಸೂಕ್ಷ್ಮವಾಗಿರುತ್ತದೆ, ಆದ್ದರಿಂದ ಈ ಸಮಯದಲ್ಲಿ ದೇಹಕ್ಕೆ ವಿಶ್ರಾಂತಿ ನೀಡುವುದು ಅತ್ಯಗತ್ಯವಾಗಿದೆ. ಭಾರತೀಯ ಸಂಸ್ಕೃತಿಯಲ್ಲಿ ಪೊರಕೆಯನ್ನು ಕೇವಲ ಕಸ ಗುಡಿಸುವ ವಸ್ತುವಾಗಿ ನೋಡದೆ, ಮನೆಗೆ ಐಶ್ವರ್ಯ ತರುವ ಲಕ್ಷ್ಮಿ ದೇವಿಯ ಸಂಕೇತ ಹಾಗೂ ಸ್ವಚ್ಛತೆಯ ಕುರುಹಾಗಿ ಪೂಜಿಸಲಾಗುತ್ತದೆ. ಹೆರಿಗೆಯ ಸಮಯದಲ್ಲಿ ತಾಯಿಯ ದೇಹದಿಂದ ಅತಿಯಾದ ಶ್ರಮ ಮತ್ತು ರಕ್ತಸ್ರಾವವಾಗುವುದರಿಂದ, ಆಧ್ಯಾತ್ಮಿಕವಾಗಿ ಶಕ್ತಿಯ ಅಸಮತೋಲನ ಉಂಟಾಗುತ್ತದೆ ಎಂಬ ನಂಬಿಕೆಯಿದೆ. ಈ ಸಮಯದಲ್ಲಿ ಬಾಣಂತಿ ಮನೆ ಗುಡಿಸುವುದರಿಂದ ಮನೆಯಲ್ಲಿರುವ ಸಕಾರಾತ್ಮಕ ಶಕ್ತಿ ಕಡಿಮೆಯಾಗುತ್ತದೆ ಎಂದು ಹಿರಿಯರು ನಂಬುತ್ತಿದ್ದರು. ಇದಲ್ಲದೆ, ಕೆಲವು ಗ್ರಾಮೀಣ ಪ್ರದೇಶಗಳಲ್ಲಿ ನವಜಾತ ಶಿಶು ಮತ್ತು ತಾಯಿಯನ್ನು ದುಷ್ಟಶಕ್ತಿಗಳಿಂದ ರಕ್ಷಿಸುವ ಸಂಕೇತವಾಗಿ ಹಾಸಿಗೆಯ ಕೆಳಗೆ ಪೊರಕೆಯನ್ನು ಇಡುವ ಪದ್ಧತಿಯೂ ಚಾಲ್ತಿಯಲ್ಲಿದೆ. ಆಯುರ್ವೇದ ಶಾಸ್ತ್ರದಲ್ಲಿ ಹೆರಿಗೆಯ ನಂತರದ ಆರೈಕೆಗೆ ಅತ್ಯಂತ ಪ್ರಮುಖ ಸ್ಥಾನ ನೀಡಲಾಗಿದೆ. ಆಯುರ್ವೇದದ ಪ್ರಕಾರ ಹೆರಿಗೆಯ ನಂತರ ತಾಯಿಯ



ದೇಹದಲ್ಲಿ 'ವಾತ ದೋಷ' ಹೆಚ್ಚಿರುತ್ತದೆ ಮತ್ತು ದೇಹದ ಭಾಗಗಳು ಸಡಿಲಗೊಂಡಿರುತ್ತವೆ. ಆದ್ದರಿಂದ ಹೆರಿಗೆಯ ನಂತರದ 40 ರಿಂದ 50 ದಿನಗಳವರೆಗೆ ತಾಯಿಗೆ ಸಂಪೂರ್ಣ ವಿಶ್ರಾಂತಿ ಕಡ್ಡಾಯವಾಗಿದೆ. ಈ ಸಮಯದಲ್ಲಿ ಪೊರಕೆಯಿಂದ ಮನೆ ಗುಡಿಸುವುದು, ಮುಂದೆ ಬಾಗುವುದು ಮತ್ತು ತೂಕದ ವಸ್ತುಗಳನ್ನು ಎತ್ತುವುದರಿಂದ ಗರ್ಭಾಶಯದ ಮೇಲೆ ತೀವ್ರ ಒತ್ತಡ ಬೀಳುತ್ತದೆ. ಇದು ದೀರ್ಘಕಾಲದ ಬೆನ್ನು ನೋವು, ಹೆರಿಗೆಯ ನಂತರದ ಅತಿಯಾದ ರಕ್ತಸ್ರಾವ ಹಾಗೂ ಹರ್ನಿಯಾದಂತಹ ಗಂಭೀರ ಆರೋಗ್ಯ ಸಮಸ್ಯೆಗಳಿಗೆ ದಾರಿ ಮಾಡಿಕೊಡುತ್ತದೆ. ಆಧುನಿಕ ವೈದ್ಯಕೀಯ ವಿಜ್ಞಾನ ಕೂಡ ಹೆರಿಗೆಯ ನಂತರದ ಮೊದಲ 4 ರಿಂದ 6ವಾರಗಳ ಕಾಲ ಬಾಣಂತಿಯರು ಯಾವುದೇ ರೀತಿಯ ಕಠಿಣ ಮನೆಕೆಲಸಗಳನ್ನು ಮಾಡಬಾರದೆಂದು ಸ್ಪಷ್ಟವಾಗಿ ಸಲಹೆ ನೀಡುತ್ತದೆ. ಪೊರಕೆಗಳಲ್ಲಿ ಕೋಟಿಗಟ್ಟಲೆ ಕಣ್ಣಿಗೆ ಕಾಣದ ಧೂಳು, ಬ್ಯಾಕ್ಟೀರಿಯಾ ಮತ್ತು ಶಿಲೀಂಧ್ರಗಳು ಇರುತ್ತವೆ. ಹೆರಿಗೆಯ ನಂತರ ತಾಯಿಯ ಗರ್ಭಾಶಯ ಮತ್ತು ಶಸ್ತ್ರಚಿಕಿತ್ಸೆಯ ಗಾಯಗಳು ಇನ್ನು ಸಂಪೂರ್ಣವಾಗಿ ಒಣಗಿರುವುದಿಲ್ಲ. ಇಂತಹ ಸೂಕ್ಷ್ಮ ಸಮಯದಲ್ಲಿ ಧೂಳು ಮತ್ತು ಕ್ರಿಮಿಗಳ ಸಂಪರ್ಕಕ್ಕೆ ಬಂದರೆ ತಾಯಿ ಹಾಗೂ ನವಜಾತ ಶಿಶುವಿಗೆ ತೀವ್ರ ತರಹದ ಸೋಂಕುಗಳು ತಗಲುವ ಅಪಾಯವಿರುತ್ತದೆ. ಹೆರಿಗೆಯ ನಂತರದ ದಿನಗಳಲ್ಲಿ ತಾಯಿಗೆ ಪೂರ್ಣ ವಿಶ್ರಾಂತಿ ಸಿಕ್ಕಾಗ ಮಾತ್ರ ಆಕೆಯ ಮಾನಸಿಕ ಒತ್ತಡ ಕಡಿಮೆಯಾಗುತ್ತದೆ. ಇದು ತಾಯಂದಿರಲ್ಲಿ ಕಂಡುಬರುವ ಹೆರಿಗೆಯ ನಂತರದ ಖಿನ್ನತೆಯನ್ನು ತಡೆಯಲು ಸಹಕಾರಿಯಾಗಿದೆ. ತಾಯಿ ಮಾನಸಿಕವಾಗಿ ಮತ್ತು ದೈಹಿಕವಾಗಿ ವಿಶ್ರಾಂತಿಯಲ್ಲಿದ್ದಾಗ ಮಾತ್ರ ಮಗುವಿಗೆ ಅಗತ್ಯವಿರುವ ಎದೆಹಾಲು ಚೆನ್ನಾಗಿ ಉತ್ಪತ್ತಿಯಾಗುತ್ತದೆ. ಜೊತೆಗೆ, ಈ ಆರಂಭಿಕ ದಿನಗಳು ಬೇರೆ ಕೆಲಸಗಳ ಒತ್ತಡವಿಲ್ಲದೆ ತಾಯಿ ಮತ್ತು ಮಗುವಿನ ನಡುವೆ ಆಳವಾದ ಭಾವನಾತ್ಮಕ ಬಾಂಧವ್ಯ ಬೆಳೆಯಲು ಅತ್ಯಂತ ಸೂಕ್ತವಾದ ಸಮಯವಾಗಿದೆ.

ನಮ್ಮ ಹಿರಿಯರು ರೂಪಿಸಿದ ಪ್ರತಿಯೊಂದು ಆಚಾರ-ವಿಚಾರಗಳ ಹಿಂದೆ ತಾಯಿ ಮತ್ತು ಮಗುವಿನ ಆರೋಗ್ಯವನ್ನು ರಕ್ಷಿಸುವ ದೊಡ್ಡ ಕಾಳಜಿಯಿತ್ತು. ಹೆರಿಗೆಯ ನಂತರ ಪೊರಕೆ ಮುಟ್ಟದಿರುವುದು ಕೇವಲ ಒಂದು ಸಾಂಪ್ರದಾಯಿಕ ನಿಯಮವಲ್ಲ, ಬದಲಿಗೆ ಬಾಣಂತಿಗೆ ಬಲವಂತವಾಗಿ ಸಂಪೂರ್ಣ ವಿಶ್ರಾಂತಿ ನೀಡಲು ರೂಪಿಸಿದ ಒಂದು ಜಾಣತನದ ವ್ಯವಸ್ಥೆಯಾಗಿದೆ.

ಆಧ್ಯಾತ್ಮಿಕ ನಂಬಿಕೆಗಳ ಗೌರವದೊಂದಿಗೆ ವೈದ್ಯಕೀಯ ಸಲಹೆಗಳನ್ನು ಪಾಲಿಸಿ ಬಾಣಂತಿಯ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಪ್ರತಿಯೊಂದು ಕುಟುಂಬದ ಜವಾಬ್ದಾರಿಯಾಗಿದೆ, ಏಕೆಂದರೆ ತಾಯಿ ಆರೋಗ್ಯವಾಗಿದ್ದರೆ ಮಾತ್ರ ಮಗುವೂ ಆರೋಗ್ಯವಾಗಿರಲು ಸಾಧ್ಯ.

# ಚರ್ಮದ ಕಾಂತಿಯಿಂದ ಹಿಡಿದು ತೂಕ ಇಳಿಕೆಯವರೆಗೆ- ಬೀಟ್‌ರೂಟ್ ಜ್ಯೂಸ್‌ನ ಲಾಭ ಒಂದೆರಡಲ್ಲ!

ತರಕಾರಿಗಳಲ್ಲಿ ಬೀಟ್ ರೂಟ್ ಅಂದಾಗ ಹೆಚ್ಚಿನವರು ದೂರ ಸರಿಯುತ್ತಾರೆ. ಆದರೆ ಇದರ ಆರೋಗ್ಯ ಲಾಭವನ್ನು ತಿಳಿದರೆ ಖಂಡಿತ ನೀವು ಸೇವನೆ ಮಾಡಬಹುದು. ಅಗತ್ಯ ಪೋಷಕಾಂಶಗಳು, ಉತ್ಕರ್ಷಣ ನಿರೋಧಕಗಳು ಮತ್ತು ನೈಟ್ರೇಟ್‌ಗಳಿಂದ ತುಂಬಿದ್ದು ನಿಮ್ಮ ದೇಹವನ್ನು ಚೈತನ್ಯಗೊಳಿಸುವುದಲ್ಲದೆ ಆರೋಗ್ಯವಾಗಿರಲು ಪ್ರೇರಿಪಿಸುತ್ತದೆ. ರಕ್ತದ ಎಣಿಕೆಗಳನ್ನು ಹೆಚ್ಚಿಸಲು ಇದರ ಸೇವನೆ ಪ್ರಮುಖವಾಗಿದ್ದು ಬೀಟ್ ರೂಟ್‌ನಲ್ಲಿರುವ ಕಬ್ಬಿಣವು ಕೆಂಪು ರಕ್ತ ಕಣಗಳ ಉತ್ಪಾದನೆಯನ್ನು ಹೆಚ್ಚು ಮಾಡುತ್ತದೆ. ಹಾಗಾಗಿ ದಿನದ ಆಹಾರದಲ್ಲಿ ಸಲಾಡ್‌ಗಳಾಗಿ, ಸ್ಮೂಥಿಯಾಗಿ,ಅಥವಾ ಜ್ಯೂಸ್ ಮೂಲಕ ಸೇವನೆ ಮಾಡಬಹುದು.

ಬೀಟ್‌ರೂಟ್ ನಲ್ಲಿ ನೈಟ್ರೇಟ್‌ಗಳು ಅಧಿಕವಾಗಿದೆ. ಇದು ಸ್ನಾಯುಗಳಿಗೆ ಆಮ್ಲಜನಕದ ಹರಿವನ್ನು ಸುಧಾರಿಸಲು ಸಹಾಯ ಮಾಡುತ್ತದೆ. ಪರಿಣಾಮವಾಗಿ, ಇದು ತ್ರಾಣ ಮತ್ತು ದೇಹದ ಶಕ್ತಿಯನ್ನು ಹೆಚ್ಚು ಮಾಡುತ್ತದೆ. ನೀವು ವ್ಯಾಯಾಮದ ಮೊದಲು ಒಂದು ಗ್ಲಾಸ್ ಬೀಟ್ ರೂಟ್ ಜ್ಯೂಸ್ ಕುಡಿಯುವುದರಿಂದ ಆಯಾಸವನ್ನು ಕಡಿಮೆ ಮಾಡಬಹುದು.

ಬೀಟ್‌ರೂಟ್ ಜ್ಯೂಸ್‌ನಲ್ಲಿರುವ ನೈಟ್ರೇಟ್‌ಗಳು ರಕ್ತನಾಳಗಳನ್ನು ವಿಸ್ತರಿಸುವ ಮತ್ತು ರಕ್ತ ಪರಿಚಲನೆಯನ್ನು ಅಭಿವೃದ್ಧಿ ಮಾಡಲು ಸಹಾಯ ಮಾಡುತ್ತದೆ. ಇದು ಕೊಲೆಸ್ಟ್ರಾಲ್ ಮಟ್ಟವನ್ನು ಕಡಿಮೆ ಮಾಡಿ ಹೃದಯದ ಆರೋಗ್ಯ ಬೆಂಬಲಿಸುತ್ತದೆ.

ನೀವು ನೈಸರ್ಗಿಕವಾಗಿ ಹೊಳೆಯುವ ಚರ್ಮ ಹೊಂದಬೇಕಾದರೆ ಬೀಟ್ ರೂಟ್ ನಿಮಗೆ ಅದ್ಭುತ ಪ್ರಯೋಜನವನ್ನು ನೀಡಬಹುದು. ಬೀಟ್‌ರೂಟ್ ನಲ್ಲಿರುವ ಉತ್ಕರ್ಷಣ ನಿರೋಧಕಗಳು, ಕಬ್ಬಿಣ ಪ್ರಮಾಣವು ಚರ್ಮವನ್ನು ರಕ್ಷಣೆ ಮಾಡುತ್ತದೆ. ಮೊಡವೆಗಳನ್ನು ರಿಮೂವ್ ಮಾಡಿ ನಿಮ್ಮ ಚರ್ಮಕ್ಕೆ ನೈಸರ್ಗಿಕ ಹೊಳಪನ್ನು ನೀಡುತ್ತದೆ. ಬೀಟ್‌ರೂಟ್ ಜ್ಯೂಸ್ ವಿಷಕಾರಿ ಅನಿಲವನ್ನು ಹೊರ ಹಾಕಲು ಸಹಾಯ ಮಾಡುತ್ತದೆ.



ಯಕೃತ್ತು ಸರಿಯಾಗಿ ಕಾರ್ಯ ನಿರ್ವಹಿಸಲು ಸಹಾಯ ಮಾಡುವ ಸಂಯುಕ್ತವಾದ ಬೀಟೈನ್ ಇದರಲ್ಲಿದೆ. ಇದು ಉತ್ತಮ ಜೀರ್ಣಕ್ರಿಯೆ, ಸುಧಾರಿತ ಚಯಾಪಚಯ ಕ್ರಿಯೆಯನ್ನು ಬೆಂಬಲಿಸಬಹುದು. ನೈಟ್ರಿಕ್ ಆಕ್ಸೈಡ್ ರಕ್ತದ ಹರಿವನ್ನು ಸುಧಾರಿಸುವುದಲ್ಲದೆ, ಮೆದುಳಿಗೆ ರಕ್ತ ಪರಿಚಲನೆಯನ್ನು ಹೆಚ್ಚಿಸುತ್ತದೆ. ಇದು ಉತ್ತಮ ಕಾರ್ಯಶೀಲತೆ, ಸ್ಮರಣಶಕ್ತಿ ಮತ್ತು ಏಕಾಗ್ರತೆಗೆ ಸಹಾಯ ಮಾಡುತ್ತದೆ. ಕಡಿಮೆ ಕ್ಯಾಲೋರಿಗಳು ಮತ್ತು ಹೆಚ್ಚಿನ ಫೈಬರ್ ಅಂಶವಿರುವ ಬೀಟ್‌ರೂಟ್ ಹಸಿವು ಆಗದಂತೆ ತಡೆಯುತ್ತದೆ. ಇದು ನಿಮ್ಮನ್ನು ದೀರ್ಘಕಾಲದವರೆಗೆ ಹೊಟ್ಟೆ ತುಂಬಿರುವಂತೆ ಮಾಡುತ್ತದೆ.

## ಕೈ ತೊಳೆಯುವ ಸರಿಯಾದ ವಿಧಾನ ಸೋಂಕು ತಡೆಯಲು ಈ ನಿಯಮಗಳನ್ನು ಪಾಲಿಸಿ

ದಿನನಿತ್ಯದ ಜೀವನದಲ್ಲಿ ಕೈಗಳು ಅತ್ಯಂತ ಹೆಚ್ಚು ಬಳಸುವ ದೇಹದ ಭಾಗಗಳಲ್ಲಿ ಒಂದಾಗಿದೆ. ಮೊಬೈಲ್ ಫೋನ್ ಬಳಸುವುದು, ಹಣದ ವ್ಯವಹಾರ ಮಾಡುವುದು, ಬಾಗಿಲಿನ ಹ್ಯಾಂಡಲ್ ಹಿಡಿಯುವುದು, ಸಾರ್ವಜನಿಕ ಸ್ಥಳಗಳಲ್ಲಿರುವ ವಸ್ತುಗಳನ್ನು ಸ್ಪರ್ಶಿಸುವುದು ಸೇರಿದಂತೆ ಅನೇಕ ಸಂದರ್ಭಗಳಲ್ಲಿ ಕೈಗಳು ವಿವಿಧ ಮೇಲ್ಮೈಗಳ ಸಂಪರ್ಕಕ್ಕೆ ಬರುತ್ತವೆ. ಈ ವೇಳೆ ಬ್ಯಾಕ್ಟೀರಿಯಾ, ವೈರಸ್ ಹಾಗೂ ಇತರ ಸೂಕ್ಷ್ಮಜೀವಿಗಳು ಕೈಗಳಿಗೆ ಅಂಟಿಕೊಳ್ಳುವ ಸಾಧ್ಯತೆ ಹೆಚ್ಚು. ಈ ಕಲುಷಿತ ಕೈಗಳಿಂದ ಕಣ್ಣು, ಮೂಗು ಅಥವಾ ಬಾಯಿಯನ್ನು ಮುಟ್ಟಿದರೆ ಅಥವಾ ಕೈ ತೊಳೆಯದೇ ಆಹಾರ ಸೇವಿಸಿದರೆ, ಈ ಸೂಕ್ಷ್ಮಜೀವಿಗಳು ದೇಹದೊಳಗೆ ಪ್ರವೇಶಿಸಿ ಶೀತ, ಜ್ವರ, ಫ್ಲೂ, ಅತಿಸಾರ (ಡಯೇರಿಯಾ), ಹೊಟ್ಟೆಯ ಸೋಂಕು ಸೇರಿದಂತೆ ಹಲವು ಸಾಂಕ್ರಾಮಿಕ ರೋಗಗಳ ಅಪಾಯವನ್ನು ಹೆಚ್ಚಿಸಬಹುದು. ಆದ್ದರಿಂದ ಕೈಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ಅತ್ಯಂತ ಅಗತ್ಯ ಎಂದು ಆರೋಗ್ಯ ತಜ್ಞರು ಸಲಹೆ ನೀಡುತ್ತಾರೆ. ಸಾಮಾನ್ಯವಾಗಿ ಕೈ ತೊಳೆಯುವುದು ಸಣ್ಣ ಅಭ್ಯಾಸವೆನಿಸಿದರೂ, ಇದು ಆರೋಗ್ಯದ ಮೇಲೆ ದೊಡ್ಡ ಪರಿಣಾಮ ಬೀರುತ್ತದೆ. ವಿಶ್ವ ಆರೋಗ್ಯ ಸಂಸ್ಥೆ ಹಾಗೂ ಅಮೆರಿಕದ ಸೆಂಟರ್ಸ್ ಫಾರ್ ಡಿಸೀಸ್ ಕಂಟ್ರೋಲ್ ಅಂಡ್ ಪ್ರಿವೆನ್ಷನ್ ಪ್ರಕಾರ, ಸರಿಯಾದ ರೀತಿಯಲ್ಲಿ ಕೈ ತೊಳೆಯುವುದರಿಂದ ಅನೇಕ ಸಾಂಕ್ರಾಮಿಕ ರೋಗಗಳ ಹರಡುವಿಕೆಯನ್ನು ತಡೆಯಬಹುದು. ವಿಶೇಷವಾಗಿ ಮಕ್ಕಳಲ್ಲಿ, ವೃದ್ಧರಲ್ಲಿ ಮತ್ತು ರೋಗನಿರೋಧಕ ಶಕ್ತಿ ಕಡಿಮೆ ಇರುವವರಲ್ಲಿ ಕೈಗಳ ಸ್ವಚ್ಛತೆ ಜೀವ ರಕ್ಷಕ ಅಭ್ಯಾಸವಾಗಬಹುದು. ಮೊದಲು ಸ್ವಚ್ಛವಾದ ಹರಿಯುವ ನೀರಿನಲ್ಲಿ ಕೈಗಳನ್ನು ಒದ್ದೆ ಮಾಡಿಕೊಳ್ಳಿ.ನಂತರ ಸಾಬೂನು ಹಚ್ಚಿ.ಎರಡೂ ಅಂಗೈಗಳು, ಕೈಗಳ ಹಿಂಭಾಗ, ಬೆರಳುಗಳ ಮಧ್ಯಭಾಗ, ಹೆಬ್ಬೆರಳು, ಉಗುರುಗಳ ಕೆಳಭಾಗ ಸೇರಿದಂತೆ ಎಲ್ಲಾ ಭಾಗಗಳನ್ನು ಚೆನ್ನಾಗಿ ಉಜ್ಜಿಕೊಳ್ಳಿ ಕನಿಷ್ಠ 20 ಸೆಕೆಂಡುಗಳ ಕಾಲ ಕೈಗಳನ್ನು ತೊಳೆಯಿರಿ.ನಂತರ ಹರಿಯುವ ನೀರಿನಲ್ಲಿ ಸಾಬೂನನ್ನು ಸಂಪೂರ್ಣವಾಗಿ ತೊಳೆಯಿರಿ. ಸ್ವಚ್ಛವಾದ ಟವೆಲ್ ಅಥವಾ ಏರ್ ಡ್ರೈಯರ್ ಬಳಸಿ ಕೈಗಳನ್ನು ಒಣಗಿಸಿಕೊಳ್ಳಿ. ಸಾಮಾನ್ಯವಾಗಿ ಸಾಬೂನು ಮತ್ತು ನೀರು ಲಭ್ಯವಿಲ್ಲದಿದ್ದರೆ ಕನಿಷ್ಠ 60% ಆಲ್ಕೋಹಾಲ್ ಹೊಂದಿರುವ ಹ್ಯಾಂಡ್ ಸ್ಯಾನಿಟೈಸರ್ ಬಳಸಬಹುದು. ಆದರೆ ಕೈಗಳ ಮೇಲೆ ಗೋಚರಿಸುವ ಮಣ್ಣು, ಎಣ್ಣೆ ಅಥವಾ ಕೊಳಕು ಇದ್ದರೆ ಸ್ಯಾನಿಟೈಸರ್ ಸಾಕಾಗುವುದಿಲ್ಲ. ಇಂತಹ ಸಂದರ್ಭಗಳಲ್ಲಿ ಸಾಬೂನು ಮತ್ತು ನೀರಿನಿಂದ ಕೈ ತೊಳೆಯುವುದೇ ಅತ್ಯುತ್ತಮ ವಿಧಾನ. ಈ ಸಂದರ್ಭಗಳಲ್ಲಿ ಕೈ ತೊಳೆಯುವುದು ಕಡ್ಡಾಯ ಅಡುಗೆ ಮಾಡುವ ಮೊದಲು ಮತ್ತು ನಂತರ ಊಟ ಮಾಡುವ ಮೊದಲು ಶೌಚಾಲಯ ಬಳಸಿದ ನಂತರ ಮಗುವಿನ ಡಯಾಪರ್ ಬದಲಿಸಿದ ನಂತರ ಅನಾರೋಗ್ಯದಿಂದ ಬಳಲುತ್ತಿರುವ ವ್ಯಕ್ತಿಯ ಆರೈಕೆಗೆ ಮೊದಲು ಹಾಗೂ ನಂತರ ಕೆಮ್ಮಿದ ಅಥವಾ ಸೀನಿದ ನಂತರ ಮೂಗು ಶುಚಿಗೊಳಿಸಿದ ನಂತರ ಕಸ ಮುಟ್ಟಿದ ನಂತರ ಸಾಕುಪ್ರಾಣಿಗಳು ಅಥವಾ ಅವುಗಳ ಆಹಾರವನ್ನು ಮುಟ್ಟಿದ ನಂತರ ಗಾಯಕ್ಕೆ ಡ್ರೆಸ್ಸಿಂಗ್ ಮಾಡುವ ಮೊದಲು ಮತ್ತು ನಂತರ ಸಾರ್ವಜನಿಕ ಸ್ಥಳಗಳಿಂದ ಮನೆಗೆ ಬಂದ ತಕ್ಷಣ ಶಾಲೆಗೆ ಹೋಗುವ ಮಕ್ಕಳು ಆಟದ ಮೈದಾನ, ತರಗತಿ ಕೊಠಡಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಹೆಚ್ಚು ಸಮಯ ಕಳೆಯುವುದರಿಂದ ಅವರಿಗೆ ಸೋಂಕು ತಗುಲುವ ಸಾಧ್ಯತೆ ಹೆಚ್ಚಿರುತ್ತದೆ. ಚಿಕ್ಕ ವಯಸ್ಸಿನಿಂದಲೇ ಸರಿಯಾದ ಕೈ ತೊಳೆಯುವ ಅಭ್ಯಾಸ ಬೆಳೆಸಿದರೆ, ಶೀತ, ಜ್ವರ, ಹೊಟ್ಟೆ ಸೋಂಕು ಮತ್ತು ಇತರ ಸಾಂಕ್ರಾಮಿಕ ರೋಗಗಳನ್ನು ತಡೆಯಲು ಸಹಾಯವಾಗುತ್ತದೆ. ಕೇವಲ ನೀರಿನಿಂದ ಕೈ ತೊಳೆಯುವುದು 20 ಸೆಕೆಂಡುಗಳಿಗಿಂತ ಕಡಿಮೆ ಸಮಯ ಕೈ ತೊಳೆಯುವುದು ಉಗುರುಗಳ ಕೆಳಭಾಗವನ್ನು ಸ್ವಚ್ಛಗೊಳಿಸದಿರುವುದು ಕೈ ತೊಳೆದ ನಂತರ ಕೊಳಕು ಟವೆಲ್ ಬಳಸುವುದು ಸ್ಯಾನಿಟೈಸರ್ ಹಚ್ಚಿದ ತಕ್ಷಣ ಕೈ ತೊಳೆಯುವುದು ಕೈಗಳನ್ನು ಸಂಪೂರ್ಣ ಒಣಗಿಸದೆ ಆಹಾರ ಮುಟ್ಟುವುದು ಈ ಲೇಖನವು ಆರೋಗ್ಯ ಜಾಗೃತಿಗಾಗಿ ಮಾತ್ರ. ಯಾವುದೇ ಸೋಂಕಿನ ಲಕ್ಷಣಗಳು ಅಥವಾ ಆರೋಗ್ಯ ಸಮಸ್ಯೆಗಳು ಕಂಡುಬಂದರೆ ವೈದ್ಯರ ಸಲಹೆ ಪಡೆಯಿರಿ.

## ಪುಟ್ಟ ಶುಂಠಿಯ ದೊಡ್ಡ ಗುಣಗಳ ಬಗ್ಗೆ ನಿಮಗೆಷ್ಟು ಗೊತ್ತು?



ಅಡುಗೆ ಮನೆಯಲ್ಲಿ ದಿನ ನಿತ್ಯ ಬಳಸುವ ಕೆಲವೊಂದು ವಸ್ತುಗಳು ಆರೋಗ್ಯ ವೃದ್ಧಿಸಲು ಸಹಕಾರಿ. ಇದರಲ್ಲಿ ಪ್ರಮುಖವಾಗಿ ಅರಶಿನ, ಕರಿಮೆಣಸು, ಜೀರಿಗೆ ಹೀಗೆ ಹಲವು ವಸ್ತುಗಳು ಸೇರಿವೆ. ಅದರಲ್ಲೂ ಹಿಂದಿನ ಕಾಲದಿಂದಲೂ ನಮ್ಮ ಅಡುಗೆ ಮನೆಯಲ್ಲಿ ಮುಖ್ಯವೆನಿಸುವ ಶುಂಠಿ ಕೇವಲ ಘಮ ಮಾತ್ರವಲ್ಲ ಅದ್ಭುತ ಆರೋಗ್ಯಕ್ಕೂ ರಾಮಬಾಣ. ಪ್ರತಿದಿನ ಸ್ವಲ್ಪ ಪ್ರಮಾಣದ ಶುಂಠಿಯನ್ನು ಸೇವಿಸುವುದು ನಿಮ್ಮ ದೇಹದ ಮೇಲೆ ಹಲವು ವಿಧಗಳಲ್ಲಿ ಧನಾತ್ಮಕ ಪರಿಣಾಮ ಬೀರುತ್ತದೆ ಎಂದು ತಜ್ಞರು ಸಲಹೆ ನೀಡಿದ್ದಾರೆ. ಶುಂಠಿ ಅದರ ರುಚಿ ಮತ್ತು ಪರಿಮಳಕ್ಕೆ ಹೆಸರುವಾಸಿಯಾದ ಜನಪ್ರಿಯ ಮಸಾಲೆಯಾಗಿದೆ. ಸಂಬಾರು ಪದಾರ್ಥಗಳಿಗೆ, ಪಾನೀಯಗಳಿಗೆ ಸುವಾಸನೆಯನ್ನು ಭರಿಸಲು ಹೆಚ್ಚಾಗಿ ಬಳಸಲಾಗುತ್ತದೆ. ಅದರ ಹೊರತಾಗಿ ಔಷಧವಾಗಿಯೂ ಶುಂಠಿ ಬಳಕೆಯಲ್ಲಿದೆ. ಇದರಲ್ಲಿ ಜೀವಸತ್ವಗಳು, ಖನಿಜಗಳು ಹಾಗೂ ಹಲವು ಪೋಷಕಾಂಶಗಳಿವೆ. ಹಾಗಾದರೆ ಶುಂಠಿಯಲ್ಲಿ ಏನೆಲ್ಲ ಆರೋಗ್ಯ ಲಾಭವನ್ನು ಪಡೆಯಬಹುದು ಎನ್ನುವುದನ್ನು ನೋಡೋಣ. ಶುಂಠಿಯು ಉರಿಯೂತ ಮತ್ತು ಕಿರಿಕಿರಿಯಿಂದ ಪಾರಾಗಲು ಸಹಾಯ ಮಾಡುತ್ತದೆ. ಜ್ವರ, ಕೆಮ್ಮು, ಗಂಟಲು ಕೆರೆತ ಇದ್ದಾಗ ವೇಗವಾಗಿ ಚೇತರಿಸಿಕೊಳ್ಳಲು ನೆರವಾಗುತ್ತದೆ. ಒಂದು ಸಣ್ಣ ತುಂಡು ಶುಂಠಿಯನ್ನು ಜಗಿದು ತಿನ್ನುವ ಮೂಲಕ ಈ ಸಮಸ್ಯೆಗಳಿಗೆ ಪರಿಹಾರ ಪಡೆಯಬಹುದು.

ಜೀರ್ಣಕ್ರಿಯೆ ಸಮಸ್ಯೆ, ಹೊಟ್ಟೆ ಉಬ್ಬರ, ಗ್ಯಾಸ್ಟ್ರಿಕ್, ಮಲಬದ್ಧತೆಯಿಂದ ಬಳಲುತ್ತಿರುವವರಿಗೆ ಶುಂಠಿ ಆರೋಗ್ಯ ವರ್ಧಕವಾಗಿ ಕೆಲಸ ಮಾಡುತ್ತದೆ. ಅದೇ ರೀತಿ ಆರೋಗ್ಯಪೂರ್ಣ ಕರುಳಿಗೆ ಸಹಾಯ ಮಾಡುತ್ತದೆ. ಬೆಳಗ್ಗೆ ಪ್ರಯಾಣ ಮಾಡುವಾಗ ನಿಮಗೆ ಆಗಾಗ್ಗೆ ವಾಕರಿಕೆ ಬರುತ್ತದೆಯೇ? ಈ ಸಂದರ್ಭದಲ್ಲಿ ಒಂದು ಸಣ್ಣ ತುಂಡು ಶುಂಠಿಯನ್ನು ಸೇವಿಸಿದರೆ ಸಾಕ, ಇದು ಹೊಟ್ಟೆಯನ್ನು ಶಾಂತಗೊಳಿಸಲು ಸಹಾಯ ಮಾಡುತ್ತದೆ. ಸಾಮಾನ್ಯವಾಗಿ ಗರ್ಭಿಣಿಯರು ಹಾಗೂ ಮಕ್ಕಳಿಗೆ ಹೆಚ್ಚು ಪ್ರಯೋಜನಕಾರಿ. ಶುಂಠಿ ಉತ್ಕರ್ಷಣ ನಿರೋಧಕವಾಗಿ ಕೆಲಸ ಮಾಡುತ್ತದೆ.

